ಗುತ್ತದೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಉತ್ತರ ಕೊಡುವಾಗ ಒಂದು ಮಾತನ್ನು ಹೇಳಿದರು, ನನ್ನ ಕೈ ಹೊಲಸು ಆಗಿದೆ ಎಂದು ಹೇಳಿದರೆ ಮಾರ್ಕೆಟ್ ಬಳಿ ಎತ್ತರವಾದ ಗಣೆಗೆ ಕಟ್ಟಿ ನೇಣು ಹಾಕಿ ಎನ್ನುವ ಮಾತನ್ನು ಹೇಳಿದರು. ತಾವು ಇಂಗ್ಲೀಷ್‌ನಲ್ಲಿ ಹೇಳಿದಿರಿ, ನಾನು ಅದೇ ಮಾತನ್ನು ಕನ್ನಡ ದಲ್ಲಿ ಹೇಳುತ್ತಿದ್ದೇನೆ. ಅಷ್ಟು ತೀವ್ರತೆ ಇದೆ, ಭ್ರಷ್ಟಾಚಾರದ ಮತ್ತು ಲಂಚದ ಆಪಾದನೆ ಬಂದು ದೃಢೀಕರಿಸಲ್ಪಟ್ಟಾಗ ಅಂಥ ಅಧಿಕಾರಿ ಯಾವನೇ ಇರಲಿ ಶಿಕ್ಷೆ ಆಗಬೇಕಾದುದು ನ್ಯಾಯ. ಇಷ್ಟು ಮಾತ್ರ ಹೇಳುತ್ತೇನೆ ಈ ಆಪಾದನೆ ಬಹಳ ಗುರುತರವಾದುದು. ಈ ೨೭ ವರ್ಷಗಳಲ್ಲಿ ಹಿರಿಯ ಅಧಿಕಾರಿಗಳು ರೆಕಾರ್ಡನ್ನು ಫೇಬ್ರಿಕ್ಸ್ ಮಾಡುವುದಕ್ಕೆ ಪ್ರಯತ್ನಪಟ್ಟರು ಎಂದು ಅನ್ನುವುದು ಇದೇ ಪ್ರಥಮ ಸಾರಿಗೆ ಬಂದಿರುವುದು. ಮಾನ್ಯ ಮಂತ್ರಿಗಳು ಮಾಡಿರುವ ಒಂದು ಆಜ್ಞೆಯನ್ನು, ಮನ್ನಣೆ ಕೊಡುವುದಕ್ಕೆ ಬದಲಾಗಿ ಉಲ್ಲಂಘನೆ ಮಾಡಿ ಸರ್ಕಾರಿ ಆಜ್ಞೆಯನ್ನು ಹೊರಡಿಸುವಾಗ ಡೆಲಿಬರೇಟ್ ಆಗಿ ಡಿಲೀಟ್ ಮಾಡಿರುವ ಸನ್ನಿವೇಶ ೨೭ ವರ್ಷದಲ್ಲಿ ಇದೇ ಪ್ರಥಮ. ಈ ತೀವ್ರತೆ ಅರ್ಥಮಾಡಿಕೊಂಡು ಗುರುವಾರ ಸಭೆ ಸೇರುವುದಕ್ಕೆ ಮುಂಚೆ, ನಿರ್ಣಯ ಮಾಡಿ ತಿಳಿಸುತ್ತಾರೆ ಎಂಬ ಆಶ್ವಾಸನೆಗೆ ಮನ್ನಣೆ ಕೊಟ್ಟು ಗುರುವಾರದವರೆಗೂ ಕಾಯಲಿಕ್ಕೆ ಸಿದ್ಧನಿದ್ದೇನೆ. ಗುರುವಾರ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು, ತಿಳಿಸದೇ ಇದ್ದರೆ, ವಿರೋಧ ಪಕ್ಷದವರ ಮೇಲೆ ಆರೋಪಣೆ ಮಾಡಿ, ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಮಾಡಿದರು ಎನ್ನುವ ದೋಷವನ್ನು ಕೊಡಬೇಡಿ. ಯಾವುದೇ ದಾಕ್ಷಿಣ್ಯ ಇಲ್ಲದೆ ನಿರ್ಣಯ ಮಾಡಿ ದೇಶದ ಜನತೆಗೆ ತೋರಿಸುವ ದೃಷ್ಟಿಯಿಂದ ಸರಕಾರ ನಿಷ್ಪಕ್ಷಪಾತವಾಗಿ ಮಾಡುತ್ತದೆ ಎಂದು ನಿರ್ಣಯ ಅನೌನ್ಸ್ ಮಾಡುತ್ತಾರೆಂದು ಅಲ್ಲಿಯವರೆಗೆ ಕಾಯಲಿಕ್ಕೆ ಸಿದ್ಧರಿದ್ದೇವೆ ?

BUDGET ESTIMATES FOR 1975-76/03.—DEMANDS FOR GRANTS

Demand No. 17 and 23 Debate Continued.

The Chairman (SMT ADDY SELDHANA) *in the Chair.*

ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಗುಡುಗು, ಸಿಡಿಲು, ಮಿಂಚಿನ ಆರ್ಭಟದ ಮಳೆ, ಸದನದ ಆಕಾಶದಲ್ಲಿ ಹೊಯ್ದ ಮೇಲೆ ರಂಗುರಂಗಿನ ಕಾಮನ ಬಿಲ್ಲು ಈ ವಿದ್ಯಾ ಇಲಾಖೆ ಬೇಡಿಕೆ. "ಲೋಕ ಕೆಟ್ಟು ಹೋಗಿದೆ ಬುದ್ಧಿ ಭಾವಕ್ಕೆ ಬೆಲೆ ಇಲ್ಲ" ಎನ್ನುವ ಮಾತು ಇದೆ. ಬುದ್ಧಿಭಾವಕ್ಕೆ ಬೆಲೆ ಕೊಟ್ಟು, ಕರ್ನಾಟಕದಲ್ಲಿ ಇರತಕ್ಕ ಎಲ್ಲಾ ಮಕ್ಕಳ ಮನದಲ್ಲಿ ಅರಿವನ್ನು ಮೂಡಿಸಿ, ಅರಿವು ಹರಿವುದು ನೋಡಿ ಜ್ಯೋತಿರ್ಲಿಂಗ ಆಗಬೇಕು. ಸಜ್ಜನಿಕೆಗೆ ಸಾಕಾರ ಮೂರ್ತಿಗಳಾದ, ವಿದ್ಯಾಮಂತ್ರಿಗಳಾದ ಮಲ್ಲಿಕಾರ್ಜುನಸ್ವಾಮಿಯವರ ಮಂಡಿಲಲ್ಲಿ, ೯೩ ಕೋಟಿ ರೂಪಾಯಿಗಳ ಹಣವನ್ನು ಇವತ್ತು ಕೊಟ್ಟಿದ್ದಾರೆ. ವಿದ್ಯಾ ಇಲಾಖೆಯ ಬೇಡಿಕೆಯನ್ನು ಬಹಳ ಸಂತೋಷದಿಂದ ಸ್ವಾಗತ ಮಾಡಿ ಕೆಲವೊಂದು ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕ ರಾದಂಥ ಮಾನ್ಯ ದೇವೇಗೌಡರು ಮರಳಿನ ಮೇಲೆ ವಿಶ್ವವಿದ್ಯಾನಿಲಯ ಸೌಧವನ್ನು ಕಟ್ಟುವುದು ಸರಿಯಲ್ಲ, ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನೂ, ಮಾನ್ಯತೆಯನ್ನೂ ನೀಡಬೇಕು ಎಂದು ಒಳ್ಳೆಯ ಅಭಿಪ್ರಾಯವನ್ನು ಅವರು ಇಲ್ಲಿ ನಿರೂಪಿಸಿದ್ದಾರೆ. ಬೆಳಕು ಯಾವ ಕಡೆಯಿಂದ ಬಂದರೂ ಸರಿಯೇ ಸ್ವಾಗತ ಮಾಡುವುದು ಸತ್‌ಸಂಪ್ರದಾಯ. ಹಾಗೆ ಬಹಳ ವಿವರವಾಗಿ ಅದರ ಆದ್ಯತೆಯನ್ನು ಎತ್ತಿ ತೋರಿಸಿರುವುದನ್ನು ನಾನು ಇಲ್ಲಿ ಸ್ವಾಗತಿಸದೇ ಇರಲಾರೆ. ಒಂದು ಮಾತು ಮಾತ್ರ ನಿಜ. ರಾಜ್ಯಾಂಗ ರಚಿಸಿದವರು, ರಾಜ್ಯಾಂಗದಲ್ಲಿ "The state shall endeavour to provide Free and Compulsary education upto the age of 14". ಎನ್ನತಕ್ಕ ಮಾತನ್ನು ಹೇಳಿ, ೧೪ ವರ್ಷದವರೆಗೆ ಪ್ರಾಥಮಿಕ ಶಿಕ್ಷಣ ಒದಗಿಸುವುದು ರಾಜ್ಯ ಸರಕಾರದ ಪ್ರಥಮ ಹಾಗೂ ಆದ್ಯ ಕರ್ತವ್ಯ ಎನ್ನತಕ್ಕ ಮಾತನ್ನು ಹೇಳಿದಾಗ, ಶಿಕ್ಷಣ ಎಲ್ಲಿಂದ ಪ್ರಾರಂಭವಾಗಬೇಕು ಎನ್ನುವ ಮಾತನ್ನು ರಾಜ್ಯಾಂಗದಲ್ಲಿ, ರಾಜ್ಯ ಘಟನೆಯಲ್ಲಿ ಹೇಳಿದಂತೆ ಕಂಡುಬರುತ್ತಾ ಇಲ್ಲ. ಆದರೆ ನಮ್ಮ ಸರಕಾರದವರು ಆರು ವರ್ಷದಿಂದ ಹತ್ತು ವರ್ಷಗಳವರೆಗೆ ಪ್ರಾಥಮಿಕ ಶಿಕ್ಷಣವನ್ನು ಈ ಒಂದು ಇಯತ್ತೆಗೆ ಬರಮಾಡಿ ಕೊಂಡು ಉಚಿತ ಶಿಕ್ಷಣ ನೀಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಮೂರು ವರ್ಷದಿಂದ ಆರು ವರ್ಷವರೆಗಿನ ಇರುವ ಮಕ್ಕಳು ಬೀದಿಯಲ್ಲಿ ಅಲೆದಾಡುತ್ತಿದ್ದು, ಮನೆಯಲ್ಲಿ ಸುಮ್ಮನೆ ಕೂತು ಕೊಂಡು ಕಾಲವನ್ನು ವ್ಯಯಮಾಡುತ್ತಾ ಇರುತ್ತಾರೆ. ಮಕ್ಕಳ ಮನೋಭೂಮಿಕೆಯನ್ನು ಹದ ಮಾಡುವ ಸಲುವಾಗಿ ಪ್ರತ್ಯೇಕವಾದ ಮಂಡಲಿಯನ್ನು ಪೂರ್ವ ಪ್ರಾಥಮಿಕ ಶಿಕ್ಷಣ ಸಲುವಾಗಿ ರೂಪಿಸಬೇಕೆಂದು ನಾನು ಸರಕಾರಕ್ಕೆ ಸಲಹೆ ಮಾಡಬಯಸುತ್ತೇನೆ. ಈಗಾಗಲೇ ಮಹಿಳೆಯರಿಗಾಗಿ ಮಕ್ಕಳಿಗಾಗಿ ಒಂದು ಹೊಸ ಇಲಾಖೆಯನ್ನು ಕರ್ನಾಟಕ ಸರಕಾರ ಆರಂಭಿಸಿದೆ. ಮೂರು ವರ್ಷದಿಂದ ೬ ವರ್ಷದ ಮಕ್ಕಳ

ಸಲುವಾಗಿ ಯಾವ ಒಂದು ಯೋಜನೆಯನ್ನು ರೂಪಿಸಿದಂತೆ ಕಂಡುಬರುತ್ತಾ ಇಲ್ಲ. ಒಂದು ವಿಚಾರ ಹೇಳಬೇಕು ಎಂದರೆ, ಶಿಕ್ಷಕರ ಸೇವಾವಧಿ ೫೫-೫೮ ಮುಗಿದು, ಶಿಕ್ಷಕರು ಶರಪಂಜರ ಮೇಲೆ ಮಲಗಿದ್ದಾರೆ. ಇಂಥ ಅನುಭವಿಕ ಶಿಕ್ಷಕರ ಸೇವಾವಧಿಯನ್ನು ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸಿಕೊಂಡು ೫೮-೬೦ ವರ್ಷಕ್ಕೆ ರಿಟೈರ್ ಮಾಡಿ. ಈಗ ರಿಟೈರ್ ಮಾಡಿದ ಕೂಡಲೇ ಅವರಿಗೆ ಪೆನ್‌ಷನ್ ಕೊಡುತ್ತಾ ಇದ್ದಾರೆ, ಅದು ಅವರ ಉಪ ಜೀವನಕ್ಕೆ ಸಾಕಾಗುತ್ತಾ ಇಲ್ಲ. ಅಂಥ ವಿಷಯದಲ್ಲಿ ನಿವೃತ್ತಿ ಹೊಂದಿರುವ ಜೀವನೋಪಾಯಕ್ಕೆ ದಾರಿ ಕಾಣದೇ ಇರುವ ನಿರ್ಗತಿಕ ಶಿಕ್ಷಕರನ್ನು ನೇಮಿಸಿಕೊಳ್ಳಿ. ಈ ನಾಡಿನಲ್ಲಿ ದೇವರು, ಗುರುವು ಎಂದು ಪೂಜಿಸಿ ಅವರುಗಳನ್ನು ಅಲೆದಾಡುವುದಕ್ಕೆ ಬಿಡಬಾರದು. ಅವರಿಗೆ ಹಾಗೆ ಆಗಬಾರದು ಎಂದು ನನ್ನ ಸಲಹೆ. ಅವರುಗಳು ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಮೂರು ವರ್ಷದಿಂದ ಆರು ವರ್ಷದವರೆಗಿನ ಮಕ್ಕಳಿಗೆ ಶಿಕ್ಷಣ ಕೊಡಲಿ, ಹೊಸ ಪದವೀಧರರನ್ನು ಎಸ್. ಎಸ್. ಎಲ್. ಸಿ. ಆದಂತ ತರುಣರನ್ನು ತೆಗೆದುಕೊಳ್ಳುವುದಕ್ಕಿಂತ ಜ್ಞಾನವೃದ್ಧರೂ, ವಯೋವೃದ್ಧರೂ ಆದ ಇವರುಗಳನ್ನು ನಿಯೋಜಿತ ಮಾಡಿದರೆ, ಡೈರೆಕ್ಟರೇಟ್ ಸರಿಯಾಗಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಸಾಕಷ್ಟು ರೆಕಮೆಂಡೇಷನ್ ಶಿಫಾರಸುಗಳನ್ನು ಈಗಾಗಲೇ ಮಲ್ಲಾರಾಧ್ಯರವರು ಸರಕಾರಕ್ಕೆ ಸಲ್ಲಿಸಿದ್ದಾರೆ ಎಂದು ಕೇಳಿದ್ದೇನೆ. ಒಳ್ಳೆಯ ವಿಚಾರಗಳು ಯಾವ ಮಾರ್ಗದಿಂದಲೇ ಬರಲಿ, ಎಲ್ಲಿಂದಲೇ ಬರಲಿ, ಅವುಗಳನ್ನು ಸ್ವಾಗತ ಮಾಡುವುದು ನಮ್ಮ ಕರ್ತವ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಎರಡನೆಯದು ಎಂದರೆ ಶಿಕ್ಷಣ ಕ್ಷೇತ್ರದಲ್ಲಿ, ಶಿಕ್ಷಣ ಪ್ರಪಂಚದಲ್ಲಿ ಈಗ ಅನೇಕ ತರಹದ ಗೊಂದಲಮಯ ವಾತಾವರಣ ಉಂಟಾಗುತ್ತಿದೆ. ಕಿತ್ತಾಡತಕ್ಕ ವಾತಾವರಣ ನಿರ್ಮಾಣವಾಗುತ್ತಿದೆ. ಏತಕ್ಕೆಂದರೆ ನಮ್ಮ ರಾಜ್ಯ ಪ್ರಸ್ತಾವನೆ ಗೊಂದಲದಿಂದಲೂ ಶಿಕ್ಷಣ ಇಲಾಖೆಗೆ ತನ್ನದೇ ಆದಂತಹ ಶಾಸನಬದ್ಧವಾದ ಯಾವ ನೀತಿ ನಿಯಮ ಮತ್ತು ನಡವಳಿಕೆಗಳು ಇಲ್ಲ. ವಿದ್ಯಾ ಸಂಸ್ಥೆಗಳು, ಮ್ಯಾನೇಜ್‌ಮೆಂಟ್, ವಿದ್ಯಾರ್ಥಿಗಳಲ್ಲಾಗಲೀ ಮತ್ತು ಶಿಕ್ಷಕರಲ್ಲಾಗಲೀ ಒಂದು ಪರದಾಟ ಕಂಡುಬರುತಾ ಇಲ್ಲ. ಗ್ರಾಂಟ್ ಇನ್‌ಏಡ್ ಕೆಲವೊಂದು ರೂಲ್ಸ್ ಮಾಡಿಕೊಂಡು ಅವರನ್ನು ಕಂಟ್ರೋಲ್ ಮಾಡುತ್ತದೆ. ವಿನಹ ತನ್ನದೇ ಆದಂತ ಶಾಸನ ಬದ್ಧವಾದ ಕಾಯಿದೆ ಕಟ್ಟಳೆಯ ಚೌಕಟ್ಟಿನಲ್ಲಿ ಅವುಗಳನ್ನು ತರಲಿಕ್ಕೆ ಇದುವರೆಗೆ ಕೂಡ ಪ್ರಯತ್ನಗಳು ನಡೆದಿಲ್ಲ.

12 00 Noon

† ಸರ್ಕಾರ ಅವುಗಳಿಗೆ ಒಂದು ಶಾಸನದ ಮೂರ್ತ ಸ್ವರೂಪವನ್ನು ಕೊಡಬೇಕು ಎಂದು ಆ ಒಂದು ಒಳ್ಳೆಯ ಉದ್ದೇಶದಿಂದ ಸಮಗ್ರ ಕರ್ನಾಟಕ ರಾಜ್ಯದ ಸಮಗ್ರ ಶಿಕ್ಷಣದ ವಿಧೇಯದ ರಿಪೋರ್ಟನ್ನು ಕೊಡಲಿಕ್ಕೆ ಕೇಳಿಕೊಂಡಿದ್ದು ಆ ಪ್ರಕಾರವಾಗಿ ಈ ಗಾಗಲೇ ಆ ರಿಪೋರ್ಟನ್ನು ಸರ್ಕಾರಕ್ಕೆ ಸಲ್ಲಿಸಿ ಒಂದು ವರ್ಷದ ಮೇಲಾಯಿತೆಂದು ನನ್ನ ಭಾವನೆಯಾಗಿದೆ. ಅದರಲ್ಲಿ ಸರ್ಕಾರದ ಸಾರ್ವಜನಿಕರ ವಿದ್ಯಾಸಂಸ್ಥೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಕ್ರಮ ಪಠ್ಯಕ್ರಮ ಎಲ್ಲಾ ವಿಷಯಗಳನ್ನು ಕುರಿತು ಹಿಂದಿನ ವಿದ್ಯಾಮಂತ್ರಿಗಳ ಭಾಷೆಯಲ್ಲಿ ಹೇಳಬೇಕೆಂದರೆ ವಿದ್ಯಾ ಇಲಾಖೆಗೆ ಬೈಬಲ್ ರೂಪವಾಗಿ ರಿಪೋರ್ಟನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ಶೀಘ್ರವಾಗಿ ಜಾರಿಗೆತರುವ ಸಲುವಾಗಿ ಸರ್ವಪ್ರಯತ್ನಗಳನ್ನು ಮಾಡಿದರೆ ಈಗ ಇರತಕ್ಕ ಲೋಪದೋಷಗಳಿಗೆ ತಡೆಯನ್ನು ಹಾಕಲಿಕ್ಕೆ ಸಾಧ್ಯವಾಗುತ್ತದೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ಮಾತನ್ನು ಮಾನ್ಯ ದೇವೇಗೌಡರು ಮೆಚ್ಚಿಗೆಯಾಗಿ ಹೇಳಿದರು. ಅದು ಏನೆಂದರ ''ವಿದ್ಯಾ ವಿನಯಂ ಶೋಭತೇ'' ಎಂಬ ಮಾತನ್ನು ಹೇಳಿದ್ದಾರೆ. ಈ ವಿದ್ಯ ಮತ್ತು ವಿನಯ ಈ ಎರಡನ್ನೂ ಮೂರ್ತಸ್ವರೂಪವಾಗಿ ಇರುವುದರಿಂದ ಸತ್‌ಪಾತ್ರವನ್ನು ಹೊಂದಿರುವುದರಿಂದ ಅವರ ಕೈಯಲ್ಲಿ ೯೩ ಕೋಟಿ ರೂಪಾಯಿಗಳನ್ನು ಅವರ ಉಡಿಯಲ್ಲಿ ಹಾಕಿದ್ದೇವೆ ಎಂದರೆ ಅವರ ಕೈಯಿಂದ ಬಹಳ ಸುಶೀಲರಾದಂಥ ಸಂಪೂರ್ಣ ಮಾನವೀಯ ಮೌಲ್ಯಗಳಿಂದ ಕೂಡಿದಂಥ ಸತ್ಪ್ರಜೆಗಳನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂಬ ಭರವಸೆ ನಮ್ಮದಾಗಿದೆ. ಈ ಭರವಸೆಗೆ ತಕ್ಕಂತೆ ವಿದ್ಯಾಮಂತ್ರಿಗಳು ಮತ್ತು ಅವರ ಇಲಾಖೆಯಲ್ಲಿ ಇರತಕ್ಕ ಎಲ್ಲಾ ಅಧಿಕಾರಿವರ್ಗದವರೂ ಈ ರೀತಿ ನಡೆದುಕೊಳ್ಳುತ್ತಾರೆ ಎಂದು ಆಶೆಯನ್ನು ಕೂಡ ಈ ಸಂದರ್ಭದಲ್ಲಿ ವ್ಯಕ್ತಪಡಿಸಲಿಕ್ಕೆ ಬಯಸುತ್ತೇನೆ. ಕೆಲವೊಂದು ಇಲಾಖೆಗಳಲ್ಲಿ ಆಗಾಗ ಹೇಳಿಕೊಳ್ಳುವ ದೋಷಗಳು ಕಂಡುಬರುತ್ತವೆ. ಈ ದೋಷಗಳನ್ನು ಅವರ ಗಮನಕ್ಕೆ ತಂದುಕೊಟ್ಟಾಗ್ಯೂ ಕೂಡ ದಕ್ಷರೀತಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡ ಉದಾಹರಣೆಗಳು ನನ್ನ ಗಮನಕ್ಕೆ ಬಂದಿದೆ. ಒಂದು ವಿಷಯ ಹೇಳಬೇಕು ಎಂದರೆ ಸಿಕ್ಕತಕ್ಕಂಥ ಹಣ ವ್ಯರ್ಥವಾಗಿ ಹೋಗಬಾರದು ; ಅದು ಸತ್ಪಾತ್ರಕ್ಕೆ ವಿನಿಯೋಗವಾಗಬೇಕು ಎಂಬ ಉದ್ದೇಶದಿಂದ ಕೇವಲ ಅಧಿಕಾರಿಗಳ ಮೇಲೆ ಈ ಜವಾಬ್ದಾರಿಯನ್ನು ಬಿಟ್ಟರೂ ಕೆಲವೊಂದು ಸಮಾಚರದಲ್ಲಿರತಕ್ಕ ಸಮಾಜಶೋಷಕರ ಕಡೆಗಣಿಸಿ ಪರಿಶೀಲಿಸಬೇಕು. ಯಾವ ಇಲಾಖೆಯೇ ಆಗಲಿ ಕಲ್ಲು ಮಣ್ಣಿನ ಸಮಸ್ಯೆ, ಕಬ್ಬಿಣದ ಸಮಸ್ಯೆಯನ್ನು

ನೋಡುವುದರ ಜೊತೆಗೆ, ಹಳ್ಳಿಹಳ್ಳಿಗೆ ಹೋದಾಗ, ಗ್ರಾಮಾಂತರ ಪ್ರದೇಶಕ್ಕೆ ವಿದ್ಯಾಮಂತ್ರಿಗಳು ಪ್ರವಾಸ ಹೋದಾಗ ಯಾವ ರೀತಿ ಅಲ್ಲಿ ಶಿಕ್ಷಣ ಕೊಡಲಾಗುತ್ತದೆ ಎಂಬುದರ ಬಗ್ಗೆ ಗಮನ ಹರಿಸಿದರೆ ಈ ಇಲಾಖೆಯನ್ನು ಇನ್ನೂ ಹೆಚ್ಚು ಚುರುಕುಗೊಳಿಸುವುದಕ್ಕೆ ಸಹಾಯಕವಾಗುತ್ತದೆಂದು ನನ್ನ ಭಾವನೆಯಾಗಿದೆ. ಇಲ್ಲಿ ಎಷ್ಟು ಹಣವನ್ನು ಖರ್ಚುಮಾಡುತ್ತಾರೆ ಎನ್ನುವ ಭಾವನೆ ಬಂದಾಗಲೂ ಕೂಡ ನನ್ನ ದೃಷ್ಟಿಯಲ್ಲಿ ವಿದ್ಯಾ ಇಲಾಖೆಯವರು ಏನು ತೆರಿಗೆಯನ್ನು ಪ್ರತಿಯೊಬ್ಬರಿಂದ ಕಲೆಕ್ಟ್ ಮಾಡುತ್ತಾರೆ ಆ ತೆರಿಗೆಯನ್ನು ಪ್ರತ್ಯೇಕವಾಗಿ ಇಟ್ಟು, ಎಜುಕೇಷನ್ ಸಸ್ ಜೊತೆಗೆ ಜನರಲ್ ಫಂಡ್ಸ್‌ನಿಂದ ಕೆಲವೊಂದು ಹಣವನ್ನು ಅದಕ್ಕೆ ಕೊಟ್ಟು ಸರ್ವಾಂಗಸುಂದರವಾದ ವಿದ್ಯಾ ಸಂಸ್ಥೆಗಳನ್ನು ಅಧಿಕವಾಗಿ ಬೆಳೆಸುವುದರಿಂದ ಪ್ರಯೋಜನ ಇಲ್ಲ ದೂರುಗಳು ಸರ್ವಸಾಮಾನ್ಯವಾಗ ಕೇಳಿಬರುತ್ತಿವೆ. ವಿದ್ಯಾಸಂಸ್ಥೆಗಳು ಎಷ್ಟು ಹೆಚ್ಚಾಗಿದ್ದರು ತಪ್ಪು ಇಲ್ಲ. ಮಕ್ಕಳಿಗೆ ಪರಿಜ್ಞಾನವನ್ನು ಕೊಟ್ಟರೆ ದೇಶಕ್ಕೆ ಅನರ್ಥ ಆಗಲಾರದು. ಇದು ನ್ಯಾಷನಲ್ ಇನ್‌ವೆಸ್ಟ್‌ಮೆಂಟ್ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಕೆಲವೊಂದು ಇಲಾಖೆಯಲ್ಲಿ ಅವ್ಯವಹಾರ ನಡೆಯುತ್ತಿದೆ. ಆದರೆ ಅಧಿಕಾರಿಗಳ ಗಮನಕ್ಕೆ ತಂದಾಗ ಸೂಕ್ತ ಗಮನ ತೆಗೆದುಕೊಂಡಿರುವುದು ಅವರ ದಕ್ಷತೆಗೆ ನಿದರ್ಶನವಾಗಿದೆ ಎಂದು ಇನ್ನೂ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಹುಬ್ಬಳ್ಳಿ, ದಾರವಾಡ, ಬೆಂಗಳೂರುಗಳಲ್ಲಿ ಮಣ್ಣು ಹಾಕತಕ್ಕ ವ್ಯಕ್ತಿಗಳು ಎಲ್ಲಾ ಇಲಾಖೆಯಲ್ಲೂ ಇದ್ದಾರೆ. ಶ್ರೀ ಪೈ ಎನ್ನತಕ್ಕವರು ೧೯೬೬–೬೭ರಲ್ಲಿ ಒಂದು ಆರ್ಗನೇಜ್ ನಡೆಸಿ, ಸೋಷಿಯಲ್ ವೆಲ್‌ಫೇರ್ ಹಾಸ್ಟಲ್ ನಡೆಸಿ, ಇನ್ನು ಯಾವುದರೋ ಗೋ ಪೇರಿಂಗ್ ನಡೆಸಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ೨೦ ರೂಪಾಯಿ ಹಾಗೆ ಸಾವಿರಾರು ರೂಪಾಯಿಗಳಷ್ಟು ಸಂಪಾದನೆ ಮಾಡಿದ್ದಾರೆ. ಇದು ಆಫೀಸಿನಲ್ಲೇ ಕೆಲಸ ನಡೆಯುತ್ತದೆ ಒಂದು ತಿಂಗಳಿಗೆ ೫ ಸಾವಿರದಿಂದ ೧೦ ಸಾವಿರ ರೂಪಾಯಿಗಳ ಸಂಪಾದನೆ ಇರತಕ್ಕ ಹಾಸ್ಟಲ್‌ನಲ್ಲಿ ವಿದ್ಯಾರ್ಥಿಗಳು ಇಲ್ಲ. ರಿಜಿಸ್ಟರ್‌ನಲ್ಲಿ ಇರತಕ್ಕ ವಿದ್ಯಾರ್ಥಿಗಳು ಯಾವ ಕಾಲದಲ್ಲಿಯೂ ಇರುವುದಿಲ್ಲ. ಅವರು ಇನ್ನೂ ಹುಟ್ಟಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಇಂತಹವನ್ನು ಗಮನಕ್ಕೆ ತಂದಾಗ ಜಾಯಿಂಟ್ ಡೈರೆಕ್ಟರಾದ ಶ್ರೀ ರಾಮಯ್ಯನವರು ಅವರನ್ನು ಹಿಡಿದು ಈಗಾಗಲೇ ಪೋಲೀಸ್ ಕೇಸ್ ಹಾಕಿದ್ದಾರೆ. ೧೯೬೯ ರಿಂದ ಈವರೆಗೆ ಉಚಿತ ಪ್ರಸಾದ ನಿಲಯ ಎಂಬ ಹೆಸರಿನಲ್ಲಿ ತಮ್ಮ ಪ್ರಸಾದವನ್ನು ಉಚಿತವಾಗಿ ಪಡೆದು, ತಮ್ಮ ನಿಲಯವನ್ನು ಉಚಿತವಾಗಿ ಪಡೆದಿರುವ ಸಮಾಜ ಶೋಷಕರನ್ನು ಹಿಡಿದು ಪೋಲೀಸ್ ಕೇಸ್ ಮಾಡಿರುವಂಥ ಉದಾಹರಣೆಗಳು ಬಹಳ ಇವೆ. ಇದೇ ರೀತಿ ದೊಡ್ಡಬಳ್ಳಾಪುರದಲ್ಲಿ ಕಾಫಿ ಪ್ಲಾಂಟರುಗಳ ಮಕ್ಕಳ ಹೆಸರನ್ನು ತೋರಿಸಿ ಅದರ ಮೂಲಕ ಹಣವನ್ನು ಸಂಪಾದನೆ ಮಾಡಿದಂತ ಉದಾಹರಣೆಗಳು ಬಹಳ ಇವೆ. ಶಿಕ್ಷಕರು ಅಲ್ಲಿ ಇಲ್ಲದೇ ಇದ್ದರೆ ಅಂತಹ ಶಿಕ್ಷಕರ ಹೆಸರಿನಲ್ಲ ಅಪ್ರೂವ್ ಮಾಡಿಸಿಕೊಂಡು ೧೦ ಇದ್ದರೆ ೧೮ ಮಾಡಿಕೊಂಡು ಸಂಬಳ ಅಥವಾ ಭತ್ಯವನ್ನು ಪಡೆಯುತಕ್ಕ ಸಂಪ್ರದಾಯ ಸಮಾಜದಲ್ಲಿ ಬರುವುದರಿಂದ ಕೇವಲ ವಿದ್ಯಾಧಿಕಾರಿಗಳ ಗಮನಕ್ಕೆ ಬರಬೇಕು ಎಂದು ಹೇಳುವುದಕ್ಕಿಂತ ಹೆಚ್ಚಾಗಿ ನಾವು ಅವರ ಮೇಲೆ ಕಣ್ಣು ಇಡಬೇಕು. ಇಂತಹ ಹೇಯವಾದ ಕೃತ್ಯವನ್ನು ಮಾಡುವ ಜನರು ಏನು ಇದ್ದಾರೆ ಅವರಿಗೆ ನಿಜವಾಗಿ ಸಮಾಜದಲ್ಲಿ ಯಾವ ಜಾತಿಯೂ ಇರುವುದಿಲ್ಲ ಅವರು ಯಾವ ಜಾತಿಗೆ ಸಮಾನರಾಗಿರಲಿ "ಹೊಲಸು ತಿಂಬವನು ಹೊಲೆಯ" ಆ ರೀತಿ ಹೊಲಸು ತಿನ್ನತಕ್ಕ ಹೊಲೆಯ ಜನರನ್ನು ಹೊರಗೆ ಎಳೆಯಲಿಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಎಷ್ಟೋ ವಿಷಯಗಳನ್ನು ಅಧಿಕಾರಿಗಳ ಗಮನಕ್ಕೆ ತಂದುಕೊಟ್ಟಾಗ್ಗೆ ಅವರು ಯೋಗ್ಯ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಹೇಳುವಾಗ, ಈ ೯೩ ಕೋಟಿ ರೂಪಾಯಿಗಳು ಪೋಲಾಗಿ ಹೋಗದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ, ನಾವು ಕೂಡ ಜಾಗ್ರತೆಯಿಂದ ಇದ್ದರೆ ಹಣ ಪೋಲಾಗುವುದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇವತ್ತು ಕರ್ನಾಟಕದಲ್ಲಿರುವ ೩ ವಿಶ್ವವಿದ್ಯಾನಿಲಯಗಳೇ ಆಗಲಿ, ಅದರ ಕಕ್ಷೆಯಲ್ಲಿ ಬರತಕ್ಕ ಸರ್ವಸಾಮಾನ್ಯ ಎಲ್ಲಾ ಕಾಲೇಜುಗಳೇ ಆಗಲೇ ಇವತ್ತು ವಾಲ್‌ಕೆನೋ ಮೇಲೆ ಕೂತಿದ್ದಾರೆ. ವಾಲ್‌ಕೆನೋ ಮೇಲೆ ಕೂತಿದ್ದಾರೆ ಎಂದರೆ ಅತಿಶಯೋಕ್ತಿಯಾದ ಅರ್ಥವಲ್ಲ. ಕಾಲೇಜುಗಳ ಒಳಗೂ ಹೊರಗೂ ಜ್ವಾಲಾಮುಖಿಯ ರೀತಿಯಲ್ಲಿ ಇರತಕ್ಕಂಥಹ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಮುಂದೆ ಬರಬೇಕು. ಎರಡನೆಯದಾಗಿ ಅಲ್ಲಿ ಇರತಕ್ಕ ವಿದ್ಯಾರ್ಥಿಗಳ ಮನೋಭೂಮಿಕೆಯನ್ನು ಕದಡಿ ರಾಜಕೀಯಕ್ಕೆ ಎಳೆಯತಕ್ಕ ಪ್ರಯತ್ನವನ್ನು ಮಾಡಬಾರದು ಅದೂ ಅಲ್ಲದೆ ವಿದ್ಯಾರ್ಥಿಗಳು ಯಾವ ರಾಜಕೀಯ ಪಕ್ಷಕ್ಕೂ ಪಾದಾರ್ಪಣ ಮಾಡಬಾರದು ಎಂದು ನನ್ನ ನಮ್ರವಾದ ಸಲಹೆ. ಹಿಂದೆ ವಿದ್ಯಾರ್ಥಿಗಳು ತಪಶ್ಚರ್ಯ ಮಾಡುತ್ತಿದ್ದರು. ಅವರು ತಪಶ್ಚರ್ಯ ವನ್ನು ಮಾಡುವಾಗ ಅವರ ತಪಸ್ಸನ್ನು ಭಂಗಗೊಳಿಸುವ ಸಂಪ್ರದಾಯ ಇತ್ತು. ಈಗ ೪—೫ ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳು ತಪಶ್ಚರ್ಯ ಮಾಡಬೇಕಾದಾಗ ಸಮರ್ಥ ರೀತಿಯಲ್ಲಿ ವಿದ್ಯಾಧ್ಯಯನ ಮಾಡಿಕೊಂಡು, ಸರ್ವರೀತಿಯಲ್ಲಿ ದೇಶವನ್ನು ಕಟ್ಟಲಿಕ್ಕೆ ಹೊರಬರಬೇಕಾದಂಥ ಸಂದರ್ಭದಲ್ಲಿ ಕೆಲವೊಂದು ಆಸೆ ಆಮಿಷಗಳನ್ನು ತೋರಿಸಿ ರಾಜಕೀಯಕ್ಕೆ ಎಳೆಯತಕ್ಕ ಸಂದರ್ಭಗಳು ಬಂದಾಗ ನನ್ನ ದೃಷ್ಟಿಯಲ್ಲಿ ಈ ವಿದ್ಯಾರ್ಥಿಗಳ ವಲಯ ಏನಿದೆ, ಎಜುಕೇಷನ್ ವಲಯ ಆ ವಲಯವನ್ನು ಬಿಟ್ಟು

ಹೊರಗೆ ಬರಬಾರದು ಅಲ್ಲೇ ಇದ್ದುಕೊಂಡು ವಿದ್ಯಾಭ್ಯಾಸವನ್ನು ಚೆನ್ನಾಗಿ ಮಾಡಿದರೆ, ನಂತರ ರಾಜಕೀಯಕ್ಕೆ ಪ್ರವೇಶ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಭಾವನೆ. ಈ ವಲಯ ಲಕ್ಷ್ಮಣನ ರೇಖೆಯೆಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಲಕ್ಷ್ಮಣನ ರೇಖೆಯನ್ನು ಬಿಟ್ಟು ಬಂದ ಸೀತೆಯ ಗತಿ ಏನಾಯಿತು ಎನ್ನುವುದನ್ನು ನೆನಸಿಕೊಳ್ಳಬೇಕು. ಹಾಗೆ ಈ ರಾಜಕೀಯ ಎನ್ನುವ ಒಂದು ಕೋಲಾಹಲ ಎದ್ದಿದೆ. ಇದರಲ್ಲಿ ಸಿಕ್ಕಿದಲ್ಲಿ ಜೀವನ ಅಸ್ತವ್ಯಸ್ತವಾಗುತ್ತದೆ. ಯಾರು ರಕ್ಷಣೆಗೆ ಬರುವುದಿಲ್ಲ. ಹಿರಿಯರು, ಮುಂದಾಳುಗಳು ಎಷ್ಟು ದಿವಸದವರೆಗೆ ತಾನೇ ರಾಜ್ಯ ಆಳುವುದಕ್ಕೆ ಬರುತ್ತಾರೆ. ಅವರು ಆಡಳಿತ ಸೂತ್ರವನ್ನು ವಿದ್ಯಾರ್ಥಿಗಳ ಕೈಯಲ್ಲಿ ಕೊಟ್ಟು ಹೋಗುವ ಸಂದರ್ಭ ಬಂದಾಗ, ನಾವು ಆ ಪಾತ್ರಕ್ಕೆ ಅರ್ಹರಲ್ಲ ಎನ್ನುವ ಭಾವನೆ ವಿದ್ಯಾರ್ಥಿಗಳಿಗೆ ಬರಕೂಡದು. ದೇಶದ ಭವಿಷ್ಯವನ್ನು ರೂಪಿಸುವುದಕ್ಕೆ ವಿದ್ಯಾರ್ಥಿಗಳ ಕೈಯಲ್ಲಿ ಆಡಳಿತಸೂತ್ರವನ್ನು ಬಿಟ್ಟು ಕೊಡುತ್ತಾರೆ. ವಿದ್ಯಾರ್ಥಿಗಳು ಸರ್ವರೀತಿಯಲ್ಲೂ ತಯಾರು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಅವರಲ್ಲಿ ಶಿಸ್ತು, ಚಾರಿತ್ರ್ಯ ಮತ್ತು ಭ್ರಾತೃತ್ವ ಭಾವ ಮಾಡಬೇಕು. ನಾನು ಎನ್. ಸಿ. ಸಿ. ಯಲ್ಲಿ ಕೆಲಸ ಮಾಡಿದ್ದೇನೆ. ಇದು ಬಹಳ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತಿದೆ ಎಂದು ಹೇಳಬಹುದು. To develop character, Comradeship and service ಎನ್ನತಕ್ಕ ಭಾವನ ಏನಿದೆ, ಭ್ರಾತೃತ್ವ ಭಾವ, ಸೇವಾಭಾವನೆಯನ್ನು ಮೂಡಿಸತಕ್ಕ ಮತ್ತು ಶಿಸ್ತನ್ನು ಮೂಡಿಸತಕ್ಕ ಕೆಲಸವನ್ನು ಎನ್. ಸಿ. ಸಿ. ಮಾಡುತ್ತಿದೆ. ಅದಕ್ಕೆ ಆದ್ಯತೆಯನ್ನು ಪ್ರೋತ್ಸಾಹವನ್ನು ಕೊಡಬೇಕು. ಇದರ ಜೊತೆಗೆ ಇನ್ನೊಂದು ಒಳ್ಳೆಯ ಕೆಲಸವನ್ನು ಮೊನ್ನೆ ತಾನೇ ಮಾಡಿದ್ದಾರೆ. ಪ್ರತಿಯೊಂದು ಎನ್. ಸಿ. ಸಿ ಡೈರೆಕ್ಟೊರೇಟಿನಲ್ಲಿಯೂ ಕೂಡ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ತೆಗೆದು ಯಾವ ಯಾವ ಕಡೆ, ಎಲ್ಲೆಲ್ಲಿ ಕೆಲಸಕಾರ್ಯಗಳು ಇರುತ್ತವೆ ಎನ್ನುವ ಮಾಹಿತಿಯನ್ನು ಒದಗಿಸಿಕೊಡುವ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇಂಥ ಒಂದು ಒಳ್ಳೆಯಕಾರ್ಯ ಮಾಡುತ್ತಿರುವ ಎನ್. ಸಿ. ಸಿ. ಗೆ ಹೆಚ್ಚಿನ ಆದ್ಯತೆಯನ್ನು, ಪ್ರಾಶಸ್ತ್ಯವನ್ನು ಕೊಟ್ಟರೆ ಶಿಸ್ತು, ಸಂಯಮ ವಿದ್ಯಾರ್ಥಿಗಳಲ್ಲಿ ಬೆಳೆದುಕೊಳ್ಳುವಂತೆ ನೋಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನಮ್ಮಲ್ಲಿ ಯುನಿಟಿ ಮತ್ತು ಡಿಸಿಪ್ಲಿನ್ ಇದ್ದರೆ ಒಳ್ಳೆಯ ರಾಷ್ಟ್ರವನ್ನು ಕಟ್ಟಬಹುದೆಂದು ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ. ಯುವಕ ಶಕ್ತಿಯನ್ನು ನಾವು ರಚನಾತ್ಮಕ ಕೆಲಸಗಳ ಕಡೆಗೆ ಉಪಯೋಗಿಸಿಕೊಳ್ಳಬೇಕು. ವರ್ಷದಲ್ಲಿ ಎಂಟೊಂಬತ್ತು ತಿಂಗಳು ವ್ಯಾಸಂಗ ಮಾಡಿದರೂ ಮೂರು ಮೂರೂವರೆ ತಿಂಗಳು ಅವರು ಯಾವುದೋ ವಿಧ್ವಂಸಕಕೃತ್ಯಗಳಲ್ಲಿ ತೊಡಗಿಸುವುದಕ್ಕೆ ಅವಕಾಶವಿಲ್ಲವಂತೆ ರಾಜ್ಯ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿ ಶ್ರಮದಾನ ಮಾಡಲಿ. ಆ ಮೂಲಕ ಕರ್ನಾಟಕವನ್ನು ಕಟ್ಟಲಿಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಜೊತೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಏನಾಗಿದೆ ಎಂದರೆ, ಗುಡಿಯನ್ನು ಕಟ್ಟಿದ್ದಾರೆ, ಮೂರ್ತಿ ಪ್ರತಿಷ್ಠಾಪನೆಯಾಗಿಲ್ಲ. ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಅಕ್ಷರತಕ್ಕ ಬೇಗೆಗೆ ತಮ್ಮನ್ನು ಬಲಿಕೊಟ್ಟರು. ಈ ಹೊತ್ತಿನವರೆಗೂ ಅದು ಭರ್ತಿಯಾಗಿಲ್ಲ. ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ದಕ್ಷರಾದ, ವ್ಯಕ್ತಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೂ ದಕ್ಷರಾದ, ಒಳ್ಳೆಯ ಅಕಾಡೆಮಿಕ್ ಕ್ವಾಲಿಫಿಕೇಷನ್ ಇರತಕ್ಕ ಒಳ್ಳೆಯ ವ್ಯಕ್ತಿಯನ್ನು ಉಪಕುಲಪತಿಗಳಾಗಿ ಕಳುಹಿಸಬೇಕು ಎನ್ನು ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಗುಲ್ಬರ್ಗ ಸೆಂಟರ್ ಏನಿದೆ ಅಲ್ಲಿ ಕೂಡ ಸಾಕಷ್ಟು ರೀತಿಯಿಂದ ಪ್ರೋತ್ಸಾಹ ದೊರೆಯುತ್ತಿಲ್ಲ. ಆಗ್ನಾಗಿ ಬರದಾಗಿದೆ. ಇದನ್ನು ಕೂಡ ಒಂದೇ ಕಣ್ಣಿನಿಂದ, ಸಮಾನದೃಷ್ಟಿಯಿಂದ ನೋಡಬೇಕು ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರಾದ ಹಮೀದ್ ಷಾ ಅವರು ಉರ್ದು ಬಗ್ಗೆ ಮಾತನಾಡಿ ಎಂದು ಹೇಳುತ್ತಿರುತ್ತಾರೆ. ನನಗೆ ಬಹಳ ಅಭಿಮಾನವೆನಿಸುತ್ತದೆ. ಹೋದವರ್ಷದ ನಮ್ಮ ಭಾವನೆಗಳಿಗೆ ಮಾನ್ಯತೆಯನ್ನು ಕೊಟ್ಟು ಬೆಂಗಳೂರು ವಿಶ್ವವಿದ್ಯಾಲಯದವರು ಎಂ. ಎ. ವ್ಯಾಸಂಗಕ್ಕೆ ಉರ್ದು ಚೇರ್ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒಂದು ಅವಕಾಶವಿದ್ದರೂ ಕೂಡ ಇನ್ನೂ ಯಾವುದೇ ರೀತಿಯಿಂದ ಉರ್ದು ಚೇರ್ ಮಾಡಿಲ್ಲ. ಗುಲ್ಬರ್ಗ ಮತ್ತು ಕರ್ನಾಟಕ ವಿಭಾಗಗಳಲ್ಲಿ ಉರ್ದು ಮತ್ತು ಪರ್ಷಿಯನ್ ಚೇರ್ ಮಾಡಬೇಕು ಎನ್ನುವ ಮನವಿಯನ್ನು ಕಳಕಳಿಯಿಂದ ಮಾಡಿಕೊಂಡು ಮಾನ್ಯ ವಿದ್ಯಾಮಂತ್ರಿಗಳ ದಕ್ಷ ನೇತೃತ್ವದಲ್ಲಿ ಇಲಾಖೆ ಚೆನ್ನಾಗಿ ಕೆಲಸ ಮಾಡಲು ಸರ್ವ ಸಹಕಾರವನ್ನೂ ನಾವು ಒದಗಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಶಿಕ್ಷಣ ಇಲಾಖೆ ಬಹಳ ಮುಖ್ಯವಾದುದು. ಈ ಇಲಾಖೆಯ ಮೂಲಕ ಒಳ್ಳೆಯ ಹುಡುಗರನ್ನು ನಾವು ತರಬೇತಿ ಮಾಡುತ್ತೇವೆ. ಅವರೇ ನಮ್ಮ ದೇಶದ

ನಾಡಿನ ಸಂಪತ್ತನ್ನು, ಸಂಸ್ಕೃತಿಯನ್ನು ಬೆಳೆಸುವವರು ಈ ಇಲಾಖೆ ಬಹಳ ದಕ್ಷತೆಯಿಂದ ನಡೆಯ ಬೇಕಾಗಿದೆ. ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನಸ್ವಾಮಿಯವರು ಬಹಳ ಗಂಭೀರಸ್ಥರು. ಅವರು ಕಷ್ಟಪಟ್ಟು ಚೆನ್ನಾಗಿ ಇಲಾಖೆಯನ್ನು ಅಭಿವೃದ್ಧಿಪಡಿಸುತ್ತಾರೆನ್ನುವ ಭಾವನೆ ಇದೆ.

ಪ್ರೈಮರಿ ಎಜುಕೇಷನ್ ಮತ್ತು ಸೆಕೆಂಡರಿ ಎಜುಕೇಷನ್ ಇವುಗಳಿಗೆ ಹೆಚ್ಚು ಮಾನ್ಯತೆ ಕೊಡಬೇಕು ಪ್ರೈಮರಿ ಎಜುಕೇಷನ್ ಪ್ರಾಕ್ಟಿಕಲ್ಲಾಗಿರಬೇಕು. ಹುಡುಗರು ಮೊದಲಿನ ಹಾಗೆ ಇಲ್ಲ. ಈಗ ಹೆಚ್ಚಿನ ರೀತಿಯಲ್ಲಿ ತರ್ಕ ಮಾಡುವ ಹುಡುಗರಿದ್ದಾರೆ. ನಾವು ಓದುತ್ತಿದ್ದ ಸಂದರ್ಭಕ್ಕೂ ಈಗಿನ ಸಂದರ್ಭಕ್ಕೂ ಬಹಳ ಅಂತರವಿದೆ. ಈಗಿನ ಹುಡುಗರು ಮೊದಲಿನಿಂದಲೂ ನಾವು ಭಾರತಕ್ಕ ದೇಶದಲ್ಲಿ, ಸ್ಥಳದಲ್ಲಿ ಏನೇನು ಸೌಲಭ್ಯಗಳು ಇವೆ, ಯಾವ ತರಹ ವಿಶೇಷ ವಸ್ತುಗಳು ದೊರೆಯುತ್ತವೆ, ಸಮಾಜದ ದೃಷ್ಟಿ ಏನಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮಕ್ಕಳು ಆಸೆ ಪಡುತ್ತಾರೆ. ಮಕ್ಕಳಿಗೆ ಸರಿಯಾದ ವಾತಾವರಣವನ್ನು ಕಲ್ಪಿಸಿ ಅವರ ಜ್ಞಾನವನ್ನು ವೃದ್ಧಿ ಮಾಡುವಂಥ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕು. ನಮ್ಮ ಎದುರಿಗೆ ಕಾಣತಕ್ಕ ವಸ್ತುಗಳು, ವಿಶೇಷ ವಿಷಯಗಳು ಇವುಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಮಕ್ಕಳಲ್ಲಿರುತ್ತದೆ ಅವರಿಗೆ ಅವುಗಳನ್ನು ತಿಳಿದು ಕೊಳ್ಳುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಕನ್ನಡದಲ್ಲಿರುವ ಪುಸ್ತಕಗಳು, ನಾನು ನೋಡಿರುವಂತೆ, ಇಂಥವಕ್ಕೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿಲ್ಲ ಇಂಗ್ಲೀಷಿನಲ್ಲಿರುವ ಪುಸ್ತಕಗಳಲ್ಲಿ ಸೈನ್ಸ್ ಮತ್ತು ಇತರ ಅನೇಕ ವಿಚಾರಗಳು ಸುಲಭ್ಯವಾಗಿ ಮಕ್ಕಳಿಗೆ ಅರ್ಥವಾಗುವಂತೆ ಇರುತ್ತದೆ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನ ಕೊಟ್ಟು ಕನ್ನಡದಲ್ಲಿಯೂ ಇಂತಹ ಪಠ್ಯಪುಸ್ತಕಗಳನ್ನು ತಯಾರು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರೈಮರಿ ಎಜುಕೇಷನ್ನಿಗೆ ಸಂಬಂಧಪಟ್ಟ ಹಾಗೆ ರೀಸರ್ಚ್ ಮಾಡುವ ರೀತಿಯಲ್ಲಿ ಒಂದು ಸಂಸ್ಥೆ ಇರಬೇಕು. ಮಕ್ಕಳ ಬೆಳವಣಿಗೆಗೆ ತಕ್ಕ ಹಾಗೆ ಅವರಲ್ಲಿರುವ ಬುದ್ಧಿಶಕ್ತಿ ಹೆಚ್ಚಾಗುವಂತೆ ಸರಿಯಾದ ಸೌಕರ್ಯಗಳು ಇರಬೇಕು. ಮಕ್ಕಳ ಬೆಳವಣಿಗೆಯನ್ನು ನೋಡಿಕೊಂಡು ಸರಿಯಾದ ರೀತಿಯಲ್ಲಿ ತರ್ಕ ಮಾಡಿ, ರಿಸರ್ಚ್ ಮಾಡಿ ಮಕ್ಕಳಿಗೆ ಬೇಕಾದ ಪುಸ್ತಕಗಳು ಮತ್ತು ಸಲಕರಣೆಗಳನ್ನು ಒದಗಿಸಿಕೊಡತಕ್ಕದ್ದು ಬಹಳ ಮುಖ್ಯ. ನಾನು ಎಲ್ಲಿದ್ದೇನೆ, ಯಾವ ಸಮಾಜದಲ್ಲಿದ್ದೇನೆ, ನನ್ನ ಸಮಾಜವೇನಿದೆ ಅದನ್ನು ಮಕ್ಕಳೂ ಅರ್ಥ ಮಾಡಿಕೊಳ್ಳುವಂತಿರಬೇಕು. ಜೊತೆಗೆ ಈ ಪ್ರಪಂಚದಲ್ಲಿ ಯಾವ ತರಹ ಸೈನ್ಸ್ ಡೆವಲಪ್ ಆಗುತ್ತಿದೆ ಎನುವುದನ್ನೂ ಅರ್ಥ ಮಾಡಿಕೊಳ್ಳಬೇಕು ಎನ್ನುವ ಕಾತುರ ಮಕ್ಕಳಿಗೆ ಇರುತ್ತದೆ. ನಾನು ಒಂದು ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದೇನೆ ಹಾಗೆಂದ ಮಾತ್ರಕ್ಕೆ ನನಗೆ ಇಂಗ್ಲೀಷಿನ ಮೇಲೆ ವ್ಯಾಮೋಹವಿದೆ ಎಂದು ಯಾರು ಭಾವಿಸಬಾರದು. ಯಾವ ಭಾಷೆ ಎನ್ನುವುದು ಮುಖ್ಯವಲ್ಲ. ಮಕ್ಕಳಿಗೆ ಯಾವ ಭಾಷೆಯಲ್ಲಿ ಹೆಚ್ಚಿನ ತರಪೇತಿ ಕೊಡುವುದಕ್ಕಾಗುತ್ತದೆ, ಹೆಚ್ಚಿನ ಮಾಹಿತಿ ಕೊಡುವುದಕ್ಕಾಗುತ್ತದೆ, ಮಕ್ಕಳು ಯಾವ ಒಂದು ಗ್ರೇಡಿನಲ್ಲಿ ಆಲೋಚನೆ ಮಾಡುತ್ತವೆ ಅಂಥ ಗ್ರೇಡಿನಲ್ಲಿಯೇ ವಿದ್ಯಾಭ್ಯಾಸವನ್ನು ಕೊಡತಕ್ಕ ಪುಸ್ತಕಗಳು ಇಂಗ್ಲೀಷಿನಲ್ಲಿ ಹೆಚ್ಚಾಗಿವೆ. ಈ ತರಹ ಪುಸ್ತಕಗಳು ಕನ್ನಡದಲ್ಲಿಯೂ ಬರಬೇಕು ಮತ್ತು ಹೆಚ್ಚು ಸಂಖ್ಯೆಯಲ್ಲಿ ಬರಬೇಕು. ಪ್ರೈಮರಿ ಎಜುಕೇಷನ್ನಿಗೆ ಇಟ್ಟಿರುವ ಪುಸ್ತಕಗಳಲ್ಲಿ ಮರಗಿಡಗಳು, ಪಕ್ಷಿಗಳು, ಮೃಗಗಳು, ಫಿಸಿಕ್ಸ್, ಕೆಮಿಸ್ಟ್ರಿ, ಇವುಗಳಿಗೆ ಸಂಬಂಧಪಟ್ಟ ವಿಚಾರಗಳಿದ್ದು ಒಂದನೇಸ್ಟಾಂಡರ್ಡ್, ಎರಡನೇ ಸ್ಟಾಂಡರ್ಡ್‌ನಲ್ಲಿರುವಾಗಲೇ ಈ ವಿಚಾರಗಳನ್ನು ಓದುವುದಕ್ಕೆ ಅವಕಾಶವಿದೆ ನಾನು ನಡೆಸುತ್ತಿರುವ ಶಾಲೆಯಲ್ಲಿ ಮಕ್ಕಳು ಓದುವುದೇ ಅಲ್ಲದೆ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಕೂಡ ಪ್ರಯತ್ನ ಮಾಡಿದ್ದೇವೆ. ಹೀಗೆ ಮಾಡುವುದರಿಂದ ಕ್ರಮೇಣ ಮಕ್ಕಳಿಗೆ ಯಾವ ವಿಚಾರದಲ್ಲಿ ಬೇಕಾದರೂ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಧೈರ್ಯವಿರುತ್ತದೆ. ಅಂಥದ್ದರಲ್ಲಿ ಸರಿಯಾದ ರೀತಿಯ ಸಲಕರಣೆಗಳನ್ನು ಕೊಟ್ಟರೆ, ಸರಿಯಾದ ರೀತಿಯಲ್ಲಿ ವಸ್ತುಗಳನ್ನು ಒದಗಿಸಿದರೆ ಖಂಡಿತವಾಗಿ ಪಿ.ಯು.ಸಿ. ಬಿ.ಎಸ್‌ಸಿ., ತರಗತಿಗಳಲ್ಲಿ ಪಾಸು ಮಾಡುವಾಗ ಹೆಚ್ಚಿನ ಮಾಹಿತಿಯನ್ನು ಪಡೆದು, ಪ್ರಾಕ್ಟಿಕಲ್ ಆಗಿ ಪ್ರತಿಯೊಂದು ಕೆಲಸ ಮಾಡುವುದಕ್ಕೂ ಧೈರ್ಯ ಬರುತ್ತದೆ.

ಈಗ ಉದಾಹರಣೆಗೆ ಹೇಳುವುದಾದರೆ ಡಿಪ್ಲೋಮಾ ಕೋರ್ಸನ್ನು ಮತ್ತು ಬಿ. ಇ. ಕೋರ್ಸನ್ನು ಮುಗಿಸಿದವರನ್ನು ಫ್ಯಾಕ್ಟರಿ ಕೆಲಸಕ್ಕೆ ತೆಗೆದುಕೊಂಡು, ಅಲ್ಲಿ ಅವರಿಗೆ ಲೇತ್ ಅಂದರೆ ಏನು ಅದರಲ್ಲಿ ಎಷ್ಟು ತರಹ ಇದೆ ಎಂದು ಕೇಳಿದರೆ ಅವರಿಗೆ ಗೊತ್ತಿರುವುದಿಲ್ಲ ; ಆ ಸಮಯದಲ್ಲಿ ಅವರು ಬೆವರು ಸುರಿಸುತ್ತಾರೆ ಮತ್ತು ಗಡಗಡ ನಡಗುತ್ತಾರೆ ಇದಕ್ಕೆ ಕಾರಣ ಅವರು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಪ್ರಾಕ್ಟಿಕಲ್ ಆಗಿ ಹೇಳಿಕೊಡುತ್ತಿಲ್ಲ. ಏನಿದ್ದರೂ ಥಿಯರಿಗೆ ಮಾನ್ಯತೆ ಕೊಡುತ್ತಿದ್ದಾರೆ. ಇದು ಸರಿಯಲ್ಲ ; ಪ್ರತಿಯೊಂದು ವಿಚಾರವನ್ನೂ ಪ್ರಾಕ್ಟಿಕಲ್ ಆಗಿ ಹೇಳಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಈಗ ೪ ಅಥವಾ ೫ನೇ ಕ್ಲಾಸ್‌ನಲ್ಲಿ ಓದುತ್ತಿರುವ ಹುಡುಗರು ತಮ್ಮ ಗ್ರಾಮದಲ್ಲಿರುವ ಪಂಚಾಯಿತಿಗೆ ಹೋಗಿ, ಪಂಚಾಯಿತಿ ಅಂದರೆ ಏನು, ಯಾವ ರೀತಿ ಕೆಲಸ ಮಾಡುತ್ತೀರಿ, ಯಾವ

ರೀತಿ ನಿರ್ಣಯ ಮಾಡುತ್ತೀರಿ ಮತ್ತು ಅದನ್ನು ಯಾವ ರೀತಿ ಕಾರ್ಯಗತ ಮಾಡುತ್ತೀರಿ ಎಂಬುದನ್ನೆಲ್ಲಾ ಕೇಳಿ ತಿಳಿದುಕೊಂಡು ಬರುತ್ತಾರೆ; ಅಲ್ಲಿ ಏನು ಲೋಪದೋಷಗಳಿವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ. ಇದೇ ರೀತಿ ಉನ್ನತ ವಿದ್ಯಾಭ್ಯಾಸ ಮಾಡುವವರಿಗೂ ಸಹ ಅವಧಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಾಕ್ಟಿಕಲ್ ಆಗಿ ಹೇಳಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ತಾಲ್ಲೂಕ್ ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಲೈಬ್ರರಿಗಳನ್ನು ಸ್ಥಾಪಿಸಬೇಕು. ಈಗ ಲೈಬ್ರರಿ ಸೆಸ್‌ನ್ನು ವಸೂಲಿ ಮಾಡಲಾಗುತ್ತಿದೆ; ಆದರೂ ಸಹ ನಮ್ಮ ಜಿಲ್ಲೆಯಲ್ಲಿ ಕಳೆದ ೩-೪ ವರ್ಷಗಳಿಂದ ಕೇವಲ ಒಂದೆರಡು ಲೈಬ್ರರಿಗಳನ್ನು ಮಾತ್ರ ತೆರೆಯಲಾಗಿದೆ. ಇನ್ನೂ ಜಾಸ್ತಿ ತೆರೆಯಬೇಕಾದರೆ ಜಾಸ್ತಿ ಸೆಸ್‌ನ್ನು ವಸೂಲಿ ಮಾಡಬೇಕೆಂದು ಕಾಣುತ್ತದೆ. ನಮ್ಮಲ್ಲಿ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿ ಇದೆ. ಆದರೆ ಸರಿಯಾದ ಲೈಬ್ರರಿಯನ್ ಇಲ್ಲ. ಅಲ್ಲಿಗೆ ಸರಿಯಾದ ಸ್ಟಾಫ್ ಕೊಡಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಲೈಬ್ರರಿ ಮತ್ತು ವಾಚನಾಲಯಗಳನ್ನು ಹೆಚ್ಚು ಹೆಚ್ಚು ತೆರೆಯಬೇಕೆಂದು ಹೇಳುತ್ತೇನೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಮೊನ್ನೆ ನಾನು ಚಿಂತಾಮಣಿಯಲ್ಲಿರುವ ಪಾಲಿಟೆಕ್ನಿಕ್‌ನಲ್ಲಿ ನಡೆದ ಒಂದು ಫಂಕ್ಷನ್‌ಗೆ ಹೋಗಿದ್ದೆ. ಅದು ಒಂದು ದೊಡ್ಡ ಕಟ್ಟಡದಲ್ಲಿ ನಡೆಯುತ್ತಿದೆ. ಅಂದು ಬಿ.ಇ.ಎಂ.ಎಲ್.ನ ಮೇನೇಜರ್ ಆದ ಶ್ರೀ ಸೋಮನಾಥ್ ಅವರು ಸಹ ಬಂದಿದ್ದರು. ಆ ಪಾಲಿಟೆಕ್ನಿಕ್‌ನಲ್ಲಿರುವ ವರ್ಕ್‌ಷಾಪ್‌ನ್ನು ನೋಡುವುದಕ್ಕೆ ಹೋಗಿದ್ದೆವು. ಅಲ್ಲಿ ೧೫-೨೦ ಲೇತ್‌ಗಳಿದ್ದವು. ಮತ್ತು ಕೆಲವು ಮಿಲ್ಲಿಂಗ್ ಅಂಡ್ ಷೇಪಿಂಗ್ ಮಿಷಿನ್‌ಗಳಿದ್ದವು. ಆದರೆ ಅಲ್ಲಿನ ವಿದ್ಯಾರ್ಥಿಗಳಿಗೆ ಪ್ರಾಕ್ಟಿಕಲ್ ಆಗಿ ಪ್ರೊಡಕ್ಟೀವ್ ಐಟಮ್ಸ್‌ನ್ನು ತಯಾರು ಮಾಡುವುದನ್ನು ಹೇಳಿಕೊಡುತ್ತಿಲ್ಲ ಎಂಬುದು ತಿಳಿಯಿತು. ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಗೌರ್ನಮೆಂಟ್ ಫ್ಯಾಕ್ಟರಿಗಳಲ್ಲಿ ಪ್ರೊಡಕ್ಟೀವ್ ಜಾಬ್ಸ್ ತೆಗೆದುಕೊಂಡರೆ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ ಮತ್ತು ಅವರಿಗೆ ಹೆಚ್ಚಿನ ಅನುಭವ ಬರುತ್ತದೆ. ಜೊತೆಗೆ ಮುಂದೆ ಅವರು ಎಚ್.ಎಂ.ಟಿ., ಬಿ.ಇ.ಎಲ್., ಮುಂತಾದ ಕಡೆಗಳಲ್ಲಿ ಕೆಲಸಕ್ಕೆ ಸೇರಿಕೊಂಡರೆ ಅವರಿಗೆ ಅಲ್ಲಿ ಧೈರ್ಯವಾಗಿ ಮಿಷನ್‌ಗಳನ್ನು ಹ್ಯಾಂಡಲ್ ಮಾಡುವುದು ಬರುತ್ತದೆ. ಆದಕಾರಣ ನಮ್ಮ ವಿದ್ಯಾ ಸಚಿವರು ಈ ಬಗ್ಗೆ ಒಂದು ಸರಿಯಾದ ರೀತಿಯಲ್ಲಿ ಕಾನೂನು ಮಾಡಿ ಎಲ್ಲ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಗೌರ್ನಮೆಂಟ್ ಫ್ಯಾಕ್ಟರಿಗಳಲ್ಲಿ ಇನ್ನು ಮುಂದೆ ಪ್ರೊಡಕ್ಟೀವ್ ಜಾಬ್ಸ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಇದರಿಂದ ನಿಮಗೂ ದುಡ್ಡು ಬರುತ್ತದೆ ಮತ್ತು ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ.

ಈಗ ಸರ್ಕಾರದವರು ಕಾಲೇಜು ಮಟ್ಟದ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸದ ಮಟ್ಟದಿಂದ ಹಿಡಿದು ಪಿ. ಯು. ಸಿ. ವರೆಗೂ ಸಹ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಅಂದರೆ ವಿದ್ಯಾರ್ಥಿಗಳಿಗೆ ಸರಿಯಾಗಿ ಪುಸ್ತಕಗಳನ್ನು ಒದಗಿಸುವುದು, ಸರಿಯಾದ ರೀತಿಯಲ್ಲಿ ಪಾಠ ಮಾಡಲು ತರಪೇತಾದ ಉಪಾಧ್ಯಾಯರನ್ನು ನೇಮಕ ಮಾಡುವುದು ಮತ್ತು ಸರಿಯಾದಂಥ ಕಟ್ಟಡಗಳನ್ನು ಕಟ್ಟಿಸಿಕೊಡುವುದು ಮಾಡದಿದ್ದರೆ ನಮ್ಮ ಶಿಕ್ಷಣದ ಮಟ್ಟ ಸುಧಾರಿಸುವುದಿಲ್ಲವೆಂದು ಹೇಳುತ್ತೇನೆ. ಈಗ ಕೆಲವು ಕಡೆಗಳಲ್ಲಿ ಪುಸ್ತಕಗಳು ಸಲಕರಣೆಗಳು ಎಲ್ಲ ಇರುತ್ತದೆ; ಆದರೆ ಉಪಾಧ್ಯಾಯರು ಇರುವುದಿಲ್ಲ; ಇದನ್ನೆಲ್ಲಾ ಸರಿಪಡಿಸಬೇಕೆಂದು ಹೇಳುತ್ತೇನೆ. ಉಪಾಧ್ಯಾಯರಿಗೆ ಈಗ ಕೊಡುತ್ತಿರುವ ತರಪೇತು ಸರಿಯಿಲ್ಲ ಎಂದು ಹೇಳುತ್ತೇನೆ. ಏಕೆಂದರೆ ಈಗ ಉಪಾಧ್ಯಾಯರುಗಳು ಕೇವಲ ಪುಸ್ತಕಗಳನ್ನು ನೋಡಿ ಮಕ್ಕಳಿಗೆ ಪಾಠ ಮಾಡುತ್ತಾರೆ. ಈ ಪದ್ಧತಿ ಸರಿಯಲ್ಲ; ಮಕ್ಕಳ ಸೈಕಾಲಜಿ ತಿಳಿದಿರತಕ್ಕಂಥ ವ್ಯಕ್ತಿಗಳನ್ನು ಸೆಲೆಕ್ಟ್ ಮಾಡಿ ಅವರಿಗೆ ಸರಿಯಾದಂಥ ಟ್ರೈನಿಂಗ್ ಕೊಡಬೇಕು. ಮತ್ತು ಮಕ್ಕಳಿಗೆ ಪಾಠ ಮಾಡಲು ಬೇಕಾದ ಸಲಕರಣೆಗಳನು ಅವರ ಕೈಯಿಂದಲೇ ತಯಾರು ಮಾಡಿಸಬೇಕು. ಈ ರೀತಿ ೩-೪ ವರ್ಷ ತರಪೇತು ಕೊಟ್ಟು ಒಳ್ಳೆಯ ಶಿಕ್ಷಕರನ್ನು ತಯಾರು ಮಾಡಬೇಕು. ಇಂತಹ ಶಿಕ್ಷಕರಿಂದ ಮಕ್ಕಳಿಗೆ ಪಾಠ ಹೇಳಿಸಿದರೆ ಮಕ್ಕಳು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿದ್ಯಾಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಯನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ೯೦ ಕೋಟಿ ಚಿಲ್ಲರೆ ರೂಪಾಯಿಗಳನ್ನು ಅವರು ಯೋಜಿಸಿದ್ದಾರೆ. ಈ ರಾಜ್ಯದಲ್ಲಿ ವಿದ್ಯಾಕ್ಷೇತ್ರವನ್ನು ಪ್ರಜ್ವಲಗೊಳಿಸುವ ಪ್ರತಿಜ್ಞೆಯನ್ನು ಅವರು ತೊಟ್ಟಿದ್ದಾರೆ. ಅವರು ಈ ಇಲಾಖೆಯ ಗದ್ದುಗೆಯನ್ನು ಹತ್ತಿದ ಬಳಿಕ ಈ ಕ್ಷೇತ್ರದಲ್ಲಿ ಇನ್ನೂ ಅನೇಕ ಮಹತ್‌ಸಾಧನೆಗಳನ್ನು ಮಾಡುವ ನಿರೀಕ್ಷೆಯನ್ನು ಮಾಡಿಕೊಂಡಿದ್ದೇನೆ. ಇವರು ಮಾತ್ರವಲ್ಲ, ಅವರ ಹಿಂದಿನವರು, ಅದಕ್ಕೂ ಹಿಂದಿನವರು ಅಂದರೆ ಕಳೆದ ೨೭ ವರ್ಷಗಳಿಂದ ಆ ಕಾಂಗ್ರೆಸ್‌ನವರು ಮತ್ತು ಈ ಕಾಂಗ್ರೆಸ್‌ನವರು ಅಂದರೆ ಎರಡು ಕಾಂಗ್ರೆಸ್‌ನವರು ಅಧಿಕಾರ ಗದ್ದುಗೆಯಲ್ಲಿ ನಡೆದುಬಂದಿರುವ ಇವರುಗಳು ಈ ರಾಷ್ಟ್ರದ ಹಾಗೂ ಈ ರಾಜ್ಯದ ಮೂಲಭೂತವಾದಂಥ ಸಮಸ್ಯೆಗಳ ಬಗ್ಗೆ, ಮೂಲ

ಭೂತವಾದಂಥ ವಿಚಾರದ ಬಗ್ಗೆ ಕಿಂಚಿತೂ ಯೋಚನೆ ಮಾಡಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ವಿಚಾರ ಕಳೆದ ೨೭ ವರ್ಷಗಳಿಂದ ಅಧಿಕಾರ ಗದ್ದುಗೆಯಲ್ಲಿ ಕಳೆದ ಎಲ್ಲ ಕಾಂಗ್ರೆಸ್ ಸರ್ಕಾರಗಳಿಗೂ ಗೊತ್ತಿರಬಹುದು.

ಶ್ರೀ ಎಸ್. ವಿ. ನಾಯಕ್.—ನಾವು ಅಧಿಕಾರಕ್ಕೆ ಬಂದು ಕೇವಲ ೨ ವರ್ಷಗಳಾಯಿತು. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾದಾಗ ಬೆಳ್ಳಿ ಹಬ್ಬವನ್ನು ಆಚರಿಸಲಾಯಿತು. ಆ ಸಮಯದಲ್ಲಿ ಸಹ ಈ ದೇಶದ ಆರ್ಥಿಕ ರಂಗದಲ್ಲಿ ಸಾಮಾಜಿಕ ರಂಗದಲ್ಲಿ ಮತ್ತು ಶೈಕ್ಷಣಿಕ ರಂಗದಲ್ಲಿ ಶೋಷಣೆ ನಡೆಯುತ್ತಿತ್ತು. ಸರಂಜಾಮಿ ಪದ್ಧತಿ ಇನ್ನೂ ಹೋಗಲಿಲ್ಲ; ಮತ್ತೆ ಕೆಲವರು ತಮ್ಮ ಒಂದು ವೈಯಕ್ತಿಕ ಹಿತಾಶಕ್ತಿಗಳನ್ನು ಬಯಸಿ ಜಾತಿ ಆಧಾರದ ಮೇಲೆ ಸಂಸ್ಥೆಗಳನ್ನು ಕಟ್ಟಿದರು. ಇವೆಲ್ಲವನ್ನೂ ಒಂದೇ ಸಲ ಬುಡದಿಂದ ಕಿತ್ತುಹಾಕುವುದು ಸಾಧ್ಯವಿಲ್ಲ ಎಂಬುದನ್ನು ತಾವು ಒಪ್ಪುತ್ತೀರಾ ?

ಶ್ರೀ ಕೋಣಂದೂರು ಲಿಂಗಪ್ಪ.-ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ : ಈಗ ಅಧಿಕಾರದಲ್ಲಿ ಹಸ ಮತ್ತು ಕರುವಿನ ಜನರಿದ್ದಾರೆ. ಈ ಹಿಂದೆ ಅಧಿಕಾರದಲ್ಲಿದ್ದವರು ಎರಡು ಎತ್ತುಗಳ ಜನರು. ಆದರೆ ಇವೆರಡೂ ಒಂದೇ ಜಾತಿಗೆ ಸೇರಿದವು. ಆದ್ದರಿಂದ ನಮ್ಮ ಸೋಷಿಯಲಿಸ್ಟ್ ಪಾರ್ಟಿಯವರು ಅದನ್ನು ಪರಿಬೇಧ ಮಾಡುವುದಿಲ್ಲ. ಅದು ಸ್ಪಟಿಕ ಸ್ಪಷ್ಟ.

ಶ್ರೀ ಬಿ. ಬೈರಪ್ಪಾಜಿ.—ನಿಮ್ಮ ಪಕ್ಷದಲ್ಲಿಯೂ ಸಹ ಎರಡು ಮೂರು ಗುಂಪುಗಳಿವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಹಾಗಿಲ್ಲ ; ತಾವು ಈ ಕಡೆ ಇದ್ದವರು ಯಾವುದೋ ಕಾರಣಕ್ಕಾಗಿ ಅಲ್ಲಿಗೆ ಹೋಗಿ ಹುತಾತ್ಮರಾಗಿ ಕುಳಿತಿದ್ದೀರಿ.

10-30 A.M.

ಮೂಲಭೂತ ಸಮಸ್ಯೆ ರಾಜ್ಯಾಂಗದಲ್ಲಿ ಇದೆ ದೇಶಭಾಷೆಗಳಲ್ಲಿ ಜನರಿಗೆ ವಿದ್ಯೆಯನ್ನು ಕೊಡಬೇಕು ಎಂಬ ಪ್ರಕರಣ ಅದರಲ್ಲಿ ಇದೆ. ಆ ಒಂದು ಪ್ರಕರಣ ತಮಗೆ ಗೊತಿರಬಹುದು. ಅದನ್ನು ಅವಲಂಬಿಸಿ ರಾಷ್ಟ್ರ ಮಟ್ಟದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು ಆ ಸಮಿತಿಯ ಹೆಸರು ಕೊಠಾರಿ ಆಯೋಗ ಎಂದು. ಅವರು, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಅತಿ ಉತ್ಕೃಷ್ಟವಾದಂಥ ಸಲಹೆಗಳನ್ನು ಸುಮಾರು ಇಲ್ಲಿಗೆ ಒಂಭತ್ತು ವರ್ಷಗಳ ಹಿಂದೆ ಕೊಟ್ಟರು. ಈ ಸರ್ಕಾರದವರು ಅದೇನ್ನೇನಾದರೂ ಗಮನಿಸಿದ್ದಾರೆಯೇ ಎಂದು ಪ್ರಶ್ನೆ ಕೇಳುತ್ತೇನೆ. ಇವತ್ತಿನ ದಿವಸ ತಾವು, ಸ್ನಾತಕೋತ್ತರ ಕೇಂದ್ರಗಳು, ಕಾಲೇಜು ಪ್ರೌಢ ಶಾಲೆಗಳು ಜೂನಿಯರ್ ಕಾಲೇಜುಗಳು—ಅವು —ಇವು, ಎಷ್ಟು ಬೇಕಾದರೂ ಮಾಡಿ ಅದರ ಬಗ್ಗೆ ನನ್ನ ವಿರೋಧವಿಲ್ಲ. ಆದರೆ, ನರ್ಸರಿಯಿಂದ ಹಿಡಿದು, ವಿಶ್ವವಿದ್ಯಾನಿಲಯದವರೆಗೆ ಸ್ನಾತಕೋತ್ತರ ಪದವಿಯವರೆಗೆ ಈ ರಾಜ್ಯದಲ್ಲೇ, ಈ ರಾಜ್ಯಭಾಷೆಯನ್ನೇ, ಈ ರಾಜ್ಯದ ಜನರಭಾಷೆಯನ್ನೇ. ತಾವು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದಿಲ್ಲವೋ, ಅಲ್ಲಿಯವರೆಗೆ ಈಗ ಕೊಡುವ ೬೦ ಕೋಟಿ ಅಲ್ಲ ೬೦೦ ಕೋಟಿ ರೂಪಾಯಿ ಕೊಟ್ಟರೂ ಅದು ಸಮುದ್ರದಲ್ಲಿ ಹುಳಿಯನ್ನು ಹಿಂಡಿದಂತಾಗುತ್ತದೆ. ಇವತ್ತಿನ ದಿವಸ ನಮಗೆ ಏನಾಗಿದೆ ಎಂದರೆ, ಪರಂಗಿ ಜನರು ಅಂದರೆ ಬಿಳಿಯ ಜನರು ಹೋದರೂ ಈ ಬಿಳಿಯ ಟೋಪಿಗಳವರು ಬಂದದ್ದು ನಮ್ಮ ರಾಷ್ಟ್ರಕ್ಕೇ ಒಂದು ದುರಂತ. ಎಲ್ಲಿಯವರೆಗೆ, ಈ ರಾಜ್ಯದ ಜನರ ಭಾಷೆ ಬಗ್ಗೆ ಕಾಳಜಿ ಬರುವುದಿಲ್ಲ, ಎಲ್ಲಿಯವರೆಗೆ ಈ ದೇಶ ಭಾಷೆಯ ಬಗ್ಗೆ ಪ್ರಾಮಾಣಿಕವಾದ ಕಳಕಳಿ ಮತ್ತು ಪ್ರೀತಿ ಹುಟ್ಟುವುದಿಲ್ಲ ಅಲ್ಲಿಯವರೆಗೆ ಇದು ಸಾರ್ಥಕವಾದಂಥ ಸರಕಾರವಲ್ಲ : ಮತ್ತು ಇದು ಸಾರ್ಥಕವಾದಂಥ ಬೇಡಿಕೆಯೂ ಅಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

12-30 P.M.

ನಾನು ಹೇಳುತ್ತೇನೆ, ಇವರೊಬ್ಬರೇ ಅಲ್ಲ. ಹಿಂದಿದ್ದ ಮಂತ್ರಿಗಳೂ ಕೂಡ ಇವರಂತೆ ಸಮಾನ ಧರ್ಮಿಗಳು : ಇವರಿಬ್ಬರೂ ಸಜ್ಜನಶೀಲರು, ಸುಸಂಸ್ಕೃತರು—ಈ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಅವಕಾಶ ಇಲ್ಲ. ಆದರೆ, ಈ ಇಬ್ಬರೂ ಕೂಡ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಯಾವುದೇ ವಿಧವಾದ ಮೂಲಭೂತ ಬದಲಾವಣೆಯನ್ನು ಮಾಡಲಿಲ್ಲ : ಮಾಡುತ್ತಲೂ ಇಲ್ಲ. ಈಗಿನತಕ್ಕ ವಿದ್ಯಾಮಂತ್ರಿಗಳು ಆಗಲೀ, ಹಿಂದೆ ಇದ್ದಂಥ ಮಂತ್ರಿಗಳಾಗಲೀ, ರಾಜ್ಯದ ಮಟ್ಟಕ್ಕೆ ಸೀಮಿತವಾಗಿ ಯಾವುದಾದರೊಂದು ಕ್ಷೇತ್ರದಲ್ಲಿ ಮೂಲಭೂತ ಸಮಸ್ಯೆಯನ್ನು ಬದಲಾವಣೆ ಮಾಡುವುದಕ್ಕೆ ಎಂದಾದರೂ ಪ್ರಯತ್ನ ಮಾಡಿದ್ದಾರೆಯೇ

ಎಂದು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ. ಕೊನೇಪಕ್ಷ ತಾಯಿ ಮಡಿಲಿನಿಂದ ಹೊರಬತಕ್ಕ ಪುಟ್ಟ ಮುದ್ದು ಮಕ್ಕಳಿಗೆ ಈ ಕರ್ನಾಟಕ ರಾಜ್ಯದಲ್ಲಿ ಯಾವ ಭಾಷೆಯಲ್ಲಿ ವಿದ್ಯೆ ಕೊಡುತ್ತಿದ್ದಾರೆ ಎಂದು ನೋಡುವುದಾದರೆ, ಇವತ್ತಿನ ದಿವಸ ಪರಂಗಿಯವರ ಇಂಗ್ಲಿಷ್ ಭಾಷೆಯಲ್ಲಿ ಕೊಡುತ್ತಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಇಂಗ್ಲೀಷರು ದೇಶ ಬಿಟ್ಟು ತೊಲಗಿದರೂ ಕೂಡ ಇಂಗ್ಲೀಷ್ ವ್ಯಾಮೋಹ ವನ್ನು ಹೊಂದಿರತಕ್ಕ ಈ ಪರಂಗಿ ಬುದ್ಧಿಯ, ಗುಲಾಮಗಿರಿ ಬುದ್ಧಿಯವರು ಹುಟ್ಟಿಕೊಂಡಿದ್ದಾರೆ. ಈ ಗುಲಾಮಗಿರಿಯ ಜನರು ಅಧಿಕಾರದಲ್ಲಿ ಎಲ್ಲಿಯವರೆಗೆ ಇರುತ್ತಾರೆ, ಅಲ್ಲಿಯವರೆಗೆ, ಯಾರು ಬಡವರು ಬಗ್ಗರು ಇದ್ದಾರೆ, ಯಾರು ಹಿಂದುಳಿದವರು ಇದ್ದಾರೆ, ಯಾರು ಹಳ್ಳಿಗಾಡುಗಳಲ್ಲಿ ಇದ್ದಾರೆ. ಅವರ ಉದ್ಧಾರ ಖಂಡಿತ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, ಇಂಗ್ಲಿಷ್ ಭಾಷೆಯನ್ನು ವಿಂಡೋ ಆಫ್ ದಿ ಇಂಟರ್‌ನ್ಯಾಷನಲ್ ಲ್ಯಾಂಗ್ವೇಜ್ ಎಂದು ಹೇಳಿದರು. ನಾನು ಕೇಳುತ್ತೇನೆ, ಅದನ್ನು ತಮಗೆ ಯಾರು ಹೇಳಿದರು ಎಂದು. ಇಂಗ್ಲಿಷ್ ಇಂಟರ್‌ನ್ಯಾಷನಲ್ ಭಾಷೆಯೇ ಅಲ್ಲ. ತಾವು ಯಾವ ಆಧಾರದ ಮೇಲೆ ಇಂಗ್ಲಿಷ್ ಇಂಟರ್‌ನ್ಯಾಷನಲ್ ಭಾಷೆ ಎಂದು ಹೇಳುತ್ತೀರಿ ? ಜಗತ್ತಿನಲ್ಲಿರತಕ್ಕ ೩೩೦ ಕೋಟಿ ಜನರಲ್ಲಿ ಮೂರನೇ ಒಂದು ಭಾಗದ ಜನ ಚೈನಾ ದೇಶದಲ್ಲಿದ್ದಾರೆ. ಅವರ ಭಾಷೆ ಇಂಗ್ಲಿಷ್ ಭಾಷೆಯೇ ? ಭೂ ಪ್ರದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆಯ ಪ್ರಮಾಣ ಈ ಎರಡನ್ನೂ ಒಟ್ಟಿಗೆ ತೆಗೆದುಕೊಂಡರೂ ಮೂರನೇ ಒಂದು ಭಾಗದ ಜನರೂ ಕೂಡ, ಆರನೇ ಒಂದು ಭಾಗದ ಜನರೂ ಕೂಡ ಇಂಗ್ಲಿಷ್ ಭಾಷೆಯನ್ನು ಬಳಸುವವರಿಲ್ಲ. ಕೇವಲ ಇಂಗ್ಲೆಂಡ್, ಅಮೆರಿಕಾ ಮತ್ತು ಆಸ್ಟ್ರೇಲಿಯಾ—ಈ ಭಾಗದ ಜನರು ಮಾತ್ರ ಇಂಗ್ಲಿಷ್ ಬಳಸುತ್ತಾರೆ. ಈ ಮೂರು ಭಾಗ ಬಿಟ್ಟರೆ ಎಲ್ಲೂ ಕೂಡ ಇಂಗ್ಲಿಷ್ ಬಳಕೆ ಇಲ್ಲ. ಚೈನಾ, ಫ್ರಾನ್ಸ್‌ನಿಂದ ಯಾರು ಎಲ್ಲಿಗೆ ಬಂದರೂ ಅವರವರ ಭಾಷೆಯಲ್ಲೇ ಮಾತನಾಡುತ್ತಾರೆ. ಹಾಗೆ ನೋಡುವುದಾದರೆ, ಕನ್ನಡವೂ ಇಂಟರ್‌ನ್ಯಾಷನಲ್ ಭಾಷೆ. ಕನ್ನಡಿಗರು, ಎಲ್ಲಿ ಎಲ್ಲಿ ಬೇರೆ ಬೇರೆ ದೇಶಗಳಲ್ಲಿ ಇರುತ್ತಾರ. ಆ ದೃಷ್ಟಿ ಯಿಂದ ಕನ್ನಡವೂ ಇಂಟರ್‌ನ್ಯಾಷನಲ್ ಭಾಷೆ. ಜ್ಞಾನದ ದೃಷ್ಟಿಯಿಂದ, ಸಾಹಿತ್ಯದ ದೃಷ್ಟಿಯಿಂದ ಅದು ಬೇರೆ ಮಾತು, ಇಂಗ್ಲಿಷ್ ಸಂಪದ್ಭರಿತ ಭಾಷೆ ಹೇಗೆ ಆಯಿತು ಎನ್ನುವುದನ್ನು ಯೋಚನೆ ಮಾಡಿದಾ. ನಮ್ಮ ನತದೃಷ್ಟ ಸರಕಾರಗಳು ಇಲ್ಲಿ ಬಂದುದರಿಂದ, ನಮ್ಮ ಕನ್ನಡ ಭಾಷೆ ಇನ್ನೂ ಸಂಪದ್ಭರಿತವಾಗಿಲ್ಲಗ ಇವತ್ತಿನ ದಿವಸ ಶಿಕ್ಷಣ ಕ್ಷೇತ್ರದಲ್ಲಿ ಅಡಿಯಿಂದ ಮುಡಿಯವರೆಗೆ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕು. ನಾನು ಹಾಗೆಂದ ಮಾತ್ರಕ್ಕೆ ಇಂಗ್ಲಿಷ್ ದ್ವೇಷಿಯಲ್ಲ : ಆದರೆ, ಇಂಗ್ಲಿಷನ್ನು ಕರ್ನಾಟಕ ದಿಂದ ಹೊರಹಾಕಬೇಕೆಂದು ಹೇಳುತ್ತೇನೆ. ಫ್ರಾನ್ಸ್, ಜರ್ಮನ್, ಜಪಾನ್, ರಷಿಯಾ, ಮತ್ತು ಚೈನಾ ಕಡೆಗಳಲ್ಲಿ ಅವರಿಗೆ ಯಾವ ಭಾಷೆ ಅವಶ್ಯಕವೋ ಅದರಲ್ಲಿ ಐಚ್ಛಿಕವಾಗಿ ಕಲಿಯಲು ಅವಕಾಶ ಇದೆ. ಅದೇ ಅವಕಾಶವನ್ನು ನಮ್ಮ ಕರ್ನಾಟಕದಲ್ಲೂ ಶಿಕ್ಷಣ ಸಚಿವರು ಜಾರಿಗೆ ತರಬೇಕು, ನಾನು ಜ್ಞಾನದ ವಿರೋಧಿ ಯಲ್ಲ : ಜ್ಞಾನದ ಶತ್ರುವಲ್ಲ : ಜ್ಞಾನ ಎನ್ನುವುದು ಎಷ್ಟು ಮೂಲೆಗಳಿಂದ ಬಂದರೂ ಕೂಡ ಅದನ್ನು ಗ್ರಹಿಸುವುದಕ್ಕೆ ಅವಕಾಶ ಇರಬೇಕು, ಜಗತ್ತಿನ ಎಲ್ಲಾ ಭಾಷೆಗಳ ಒಂದೊಂದು ತರಗತಿಯನ್ನು ಎಲ್ಲಾ ಕಡೆಗಳಲ್ಲೂ ಇಡಿ, ಕಲಿಯಲು ಅಪೇಕ್ಷೆವುಳ್ಳವರು ಅವುಗಳನ್ನು ಕಲಿಯುತ್ತಾರೆ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ರಾಜ್ಯದಲ್ಲಿ ಬದುಕತಕ್ಕ ಜನ, ರಾಜ್ಯದಲ್ಲಿ ಓದತಕ್ಕ ಜನ ಕನ್ನಡದ ಮೂಲಕವೇ ಕಲಿಯಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಹಮೀದ್ ಷಾ ಅವರು ನಿನ್ನೆ ಮಾತನಾಡುತ್ತಾ ಏನು ಅಭಿಪ್ರಾಯಗಳನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ಅವರೊಡನೆ ನಾನು ಸಂಪೂರ್ಣವಾಗಿ ಧ್ವನಿಗೂಡಿಸುತ್ತೇನೆ. ಈ ರಾಜ್ಯದಲ್ಲಿ ನಲವತ್ತು ಲಕ್ಷ ಜನ ಉರ್ದು ಭಾಷೆ ಆಡುವ ಬಗ್ಗೆ ಹೇಳಿದ್ದಾರೆ. ಅದು ಸಂಪೂರ್ಣವಾಗಿ ಸಮರ್ಥನೀಯವಾದುದು. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಉರ್ದು ಶಾಲೆಗಳನ್ನು ಕೊಡಬೇಕು. ಅವರು ಕಲಿಯಲಿಕ್ಕೆ ಅವಕಾಶ ಇದ್ದರೂ, ತಾವು ಕೊಡುವುದಕ್ಕೆ ತಯಾರಾಗಿಲ್ಲ. ತಯಾರು ಇಲ್ಲದಿದ್ದರೆ ಇಷ್ಟು ಖರ್ಚು ಮಾಡುತ್ತಾ ಇರುವುದು ಏತಕ್ಕೆ ? ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟು, ಈಗ ತಾವು ಮಾಡ ತಕ್ಕುದ್ದು ದ್ರೋಹ ಎಂದು ಹೇಳಬೇಕೋ ಅಥವಾ ಬಿಡಬೇಕೊ ?

ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಈ ದಿನದಿಂದಲೇ ಕನ್ನಡವನ್ನು ಸಂಪೂರ್ಣವಾಗಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕು. ತಮಗೆ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ, ಯಾವ ಯಾವ ನರ್ಸರಿಗಳಲ್ಲಿ ಕನ್ನಡವನ್ನು ಕಲಿಸುವುದಿಲ್ಲ, ಅಂಥ ಕಾಲೇಜು-ನರ್ಸರಿಗಳಿಗೆ ಸಹಾಯಧನವನ್ನು ನಿಲ್ಲಿಸ ಬೇಕು. ಅದಲ್ಲದೆ ಪಬ್ಲಿಕ್ ಸರ್ವಿಸ್ ಕಮಿಷನಲ್ ನಲ್ಲಿ ಕನ್ನಡದಲ್ಲಿ ಒಂದು ಪತ್ರಿಕೆ ಇರಬೇಕು. ಕನ್ನಡ ದಲ್ಲಿ ಪ್ರಶ್ನೆ ಕೊಡಬೇಕು : ಕನ್ನಡದಲ್ಲೆ ಪರೀಕ್ಷೆ ನಡೆಸಬೇಕು. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಆಯಾ ದೇಶಭಾಷೆಗಳಲ್ಲ ಕೇಳುತ್ತಿದ್ದಾರೆ. ಆದರೆ, ಆ ಒಂದು ಪದ್ಧತಿ ನಮ್ಮಲ್ಲಿ ಇಲ್ಲ. ಇವರು ದಯವೇ ಇಲ್ಲದ ಜನ, ಕನ್ನಡದಬಗ್ಗೆ ಅಭಿಮಾನವೇ ಇಲ್ಲದ ಜನ, ವಿಧಾನ ಸೌಧ ಕಟ್ಟಿಸಿದ

ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಒಂದು ದೊಡ್ಡ ತಪ್ಪು ಮಾಡಿದರು. ಇದನ್ನು ಕಲ್ಲಿನಿಂದ ಕಟ್ಟಿಸಿದರು: ಮಣ್ಣಿನಲ್ಲಿ ಕಟ್ಟಿಸಿದ್ದರೆ ಮಳೆ ನೀರಿಗೆ ಕರಗುತ್ತಿತ್ತು. ಆದರೆ, ಇವರ ಹೃದಯವೆಲ್ಲಾ ಕಲ್ಲಾಗಿ ಕೂತಿವೆ. ಆದರೆ, ನಾವುಗಳು ಮಾತ್ರ ಕಲ್ಲಾಗುವುದಿಲ್ಲ. ಇವರು ಕಲ್ಲಾಗಿರುವುದರಿಂದ, ನಮ್ಮ ಪ್ರಾರ್ಥನೆ ಕೀರ್ತನೆಗಳು ಪ್ರಯೋಜನವಾಗುವುದಿಲ್ಲ. ಇದಕ್ಕೆ ಜಾಣಾ-ಸುಂತ್ರಿಗೆಯೇ ಬೇಕು ಆಗಲೇ ಇವರು ಕರಗುವುದು. ಶ್ರೀಮಾನ್ ಸನದಿಯವರು ಮಾತನಾಡುತ್ತಾ, ವಿದ್ಯಾರ್ಥಿಗಳು, ಯುವಜನ ಶಕ್ತಿ ಬಗ್ಗೆ ಹೇಳಿದರು. ಅವರ ಅಭಿಪ್ರಾಯದಲ್ಲಿ ಎಲ್ಲರೂ ಶಿಸ್ತುಬದ್ಧವಾಗಿ ಮಂತ್ರಿಗಳು ಬಂದಾಗ ಎದ್ದು ನಿಂತು ಅವರಿಗೆಲ್ಲಾ ಪರಾಕು ಹೇಳಿಕೊಂಡು, ಶಿಸ್ತುಬದ್ಧ ಕಾಂಗ್ರೆಸ್ಸಿಗರಾಗಿರಬೇಕು ಎನ್ನುವ ಅರ್ಥದಲ್ಲಿ ಹೇಳಿದರು.

ಇಲ್ಲಿಯವರೆಗೆ ನೀವು ವಿದ್ಯಾರ್ಥಿಗಳನ್ನು, ಯುವಜನರನ್ನು ನಿರುದ್ಯೋಗಿಗಳಾಗಿ ಮಾಡುವ ಮೂಲಭೂತವಾದ ಪದ್ಧತಿಯನ್ನು ಅನುಸರಿಸುತ್ತಾ ಇದ್ದೀರಿ. ಇಲ್ಲಿಯವರೆಗೆ ವಿದ್ಯಾರ್ಥಿಗಳು, ಯುವಜನರು ಸುಮ್ಮನೆ ಇದ್ದರೂ ಇನ್ನುಮುಂದೆ ಇರುವುದಕ್ಕೆ ಸಾಧ್ಯವಿಲ್ಲ, ಲಕ್ಷೋಪಲಕ್ಷ ಜನ ನಿರುದ್ಯೋಗಿಗಳಾಗಿದ್ದಾರೆ,

ಶ್ರೀ ಎನ್. ರಾಚಯ್ಯ.—ತಮಗೆ ಡಾಕ್ಟರ್ ಲೋಹಿಯಾರವರ ಸಿದ್ಧಾಂತದಲ್ಲಿ ನಂಬಿಕೆ ಇದೆ ಎಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ತಮಗೆ ಅನುಮಾನ ಉಂಟೆ ?

ಶ್ರೀ ಎನ್. ರಾಚಯ್ಯ.—ಅವರು ಈ ರೀತಿ ಹೇಳಿದ್ದಾರೆ. We can guarantee what is called right to education, but not to employment ಎಂದು ಹೇಳಿದ್ದಾರೆ. ವಿದ್ಯೆ ಇದ್ದವರಿಗೆ ಸರ್ಕಾರ ಉದ್ಯೋಗ ಕೊಡುವುದು ಎಲ್ಲಿ ಗ್ಯಾರಂಟಿ ಇದೆ ?

ಶ್ರೀ ಕೋಣಂದೂರು ಲಿಂಗಪ್ಪ.—ಜಾಬ್ ಓರಿಯಂಟೆಡ್ ಎಜುಕೇಷನ್ ಕೊಡಬೇಕು. ಆವಾಗ ನಿಮ್ಮನ್ನು ಯಾರೂ ಎಂಪ್ಲಾಯಮೆಂಟ್ ಕೇಳುತ್ತಾರೆ ? ಹಿಂದೆ ಒಂದು ಸಾರಿ ಪಿ.ಯು.ಸಿ. ಒಳಗೆ ಜಾಬ್ ಓರಿಯಂಟೆಡ್ ಎಜುಕೇಷನಲ್ ಟ್ರೈನಿಂಗ್ ಎನ್ನುವ ಸಬ್ಜೆಕ್ಟ್ ಸೇರಿಸತಕ್ಕದ್ದು ಎಂದು ಪ್ರಪೋಸಲ್ ಇತ್ತು, ಈಗ ಇದೆಯೋ, ಮಾಯವಾಗಿದೆಯೋ ಗೊತ್ತಿಲ್ಲ. ಅದು ಇದ್ದಿದ್ದರೆ ಈ ಟಿ.ಸಿ.ಹೆಚ್., ಟ್ರೈನಿಂಗ್ ಸ್ಕೂಲುಗಳು ಅನಾವಶ್ಯಕ ಆಗುತ್ತಿತ್ತು. ಆದುದರಿಂದ ಈಗ ಜಾಬ್ ಓರಿಯಂಟೆಡ್ ಎಜುಕೇಷನ್ ಕೊಟ್ಟರೆ ಆಗ ಯಾವ ಸಮಸ್ಯೆ ಇರುವುದಿಲ್ಲ. ಇವೊತ್ತಿಗೂ ಮೂಲಭೂತವಾಗಿ ಅಂತಹ ಸಮಸ್ಯೆ ಬಗ್ಗೆ ಏನೇನೂ ಕೆಲಸ ಮಾಡಿಲ್ಲ. ಆ ಬಗ್ಗೆ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈವತ್ತು ಕನ್ನಡದ ಬಗ್ಗೆ ಹೇಳುವುದಾದರೆ ಕನ್ನಡ ಆಡಳಿತ ಭಾಷೆ ಆಗಿಲ್ಲ. ಕೆಲವೊಂದು ಸಾಕ್ಷಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕನ್ನಡ ಬಳಕೆ ಹೇಗೆ ನಡೆಯುತ್ತಿದೆ ಎಂದರೆ ಮೇಲ್ಮನೆ ವಿಧಾನ ಪರಿಷತ್ತಿನಲ್ಲಿ, ಶ್ರೀಯುತ ಎ. ಕೆ ಸುಬ್ಬಯ್ಯನವರು, ವೈ. ಎಸ್. ಪಾಟೀಲ್ ಅವರ ಗಮನ ಸೆಳೆಯುವ ಸೂಚನೆ ಕ್ರಮಾಂಕ ೧೩ಕ್ಕೆ ಸರ್ಕಾರದ ಸೆಕ್ರೆಟರಿಯೇಟ್‌ನಿಂದ ಕನ್ನಡದಲ್ಲಿ ಸ್ಟೇಟ್‌ಮೆಂಟ್ ಹೋಗಿದೆ. ಅದರಲ್ಲಿ ಬಳಸುವ ಕನ್ನಡ ಅಕ್ಷರಗಳಲ್ಲಿ ಬೇಕಾದಷ್ಟು ತಪ್ಪುಗಳಿವೆ. ಆದ್ದರಿಂದ ಅವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಂತಹ ಕನ್ನಡ ಯಾವುದೇ ಆದರೂ ನಾನು ವಿರೋಧಿ. ಆ ರೀತಿ ಕನ್ನಡವನ್ನು ಬಳಸುತ್ತಿದ್ದಾರೆ. ಅದು ಕೈಯಲ್ಲಿ ಬರೆದಿರತಕ್ಕದ್ದು. ಪ್ರಿಂಟ್ ಮಿಸ್ಟೇಕ್ ಅಲ್ಲ, ಅನು ಕಾಗುಣಿತದ ತಪ್ಪು ಇರತಕ್ಕಂಥಾದ್ದು ಇಂತಹ ಜನ ಇದ್ದಾರೆ, ಇಂತಹ ಕನ್ನಡ ಭಾಷೆಯನ್ನು ಸರ್ಕಾರದವರು ಬಳಸುತ್ತಿದ್ದಾರೆ.

ಕಳೆದ ಅಧಿವೇಶನದಲ್ಲಿ ನನ್ನ ಸ್ನೇಹಿತರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಕೆಲವು ಅನ್ಯಾಯಗಳ ಬಗ್ಗೆ ಹೇಳಿದರು. ಇಲ್ಲಿ ಪ್ರಸ್ತಾಪ ಮಾಡಿದ ನಂತರ ಸಂಬಂಧಪಟ್ಟ ಶಾಲೆಗಳಲ್ಲಿ ಅಲ್ಲಿಯ ಮ್ಯಾನೇಜ್‌ಮೆಂಟ ನವರು ಅಧ್ಯಾಪಕ ವರ್ಗದವರನ್ನು ನಿರ್ಗತಿಕರನ್ನಾಗಿ ಮಾಡಿದ್ದಾರೆ. ಕೆ. ಪಿ. ಎನ್. ಬಾಲಕರ ಪ್ರೌಢಶಾಲೆ ಮಾಗಡಿ, ಅಲ್ಲಿ ನಿರ್ಗತಿಕರಾಗಿರುವವರಿಂದ ಕಾಗದ ಬಂದಿದೆ. ಈ ಅವ್ಯವಹಾರದಿಂದ ಅವರ ಪರಿಸ್ಥಿತಿ ಇವೊತ್ತು ಅವರು ಬೀದಿಪಾಲಾಗಿದ್ದಾರೆ. ಇವೊತ್ತು ಕೆಲವು ಅವ್ಯವಹಾರದ ಬಗ್ಗೆ ಪಟ್ಟಿ ಕೊಟ್ಟರೆ ಅಧ್ಯಾಪಕರ ಗತಿ ಏನಾಗುತ್ತದೆ ಎಂದು ತಮಗೆ ಗೊತ್ತಾಗುತ್ತದೆ. ಇದರ ಬಗ್ಗೆ ಭರವಸೆ ಕೊಡಬೇಕು. ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೆ ರಾಜರಾಜೇಶ್ವರಿ ಪ್ರಾಥಮಿಕ ಪಾಠಶಾಲೆ, ಬೆಂಗಳೂರು ಇಲ್ಲಿ ಭ್ರಷ್ಟಾಚಾರ ಬೇಕಾದಷ್ಟು ನಡೆದಿದೆ ಎಂದು ಕಾಗದ ಕಳುಹಿಸಿದ್ದಾರೆ, ಇದರ

ದಾಖಲೆಗಳು ಇವೆ. ಮತ್ತೆ ವಿ.ಬಿ.ಬಿ. ವಿದ್ಯಾಶಾಲೆ, ಇದೇರೀತಿ ಅನೇಕ ವಿದ್ಯಾಸಂಸ್ಥೆಗಳಿಂದ ಕಾಗದಗಳು ಬಂದಿವೆ, ಅಲ್ಲಿ ಬೇಕಾದಷ್ಟು ಅನ್ಯಾಯ, ಭ್ರಷ್ಟಾಚಾರ ನಡೆಯುತ್ತಾ ಇದೆ. ಇಲ್ಲಿ ಗಾಬರಿಯಾಗುತ್ತಾ ಇದೆ, ಅವರ ಜೊತೆಯಲ್ಲಿ ಸಾಮಿಲಾಗಿ ಅಧ್ಯಾಪಕವರ್ಗದವರಿಗೆ ಕಿರುಕುಳ ಕೊಡುವಂತ ಕಳವಳ ನಮಗೆ ಇರುವುದರಿಂದ ಈ ಬಗ್ಗೆ ಹೆಚ್ಚು ಊಹಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಈಗ ನನ್ನಲ್ಲಿ ಇರುವ ಎಲ್ಲಾ ಪತ್ರಗಳನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ಎಷ್ಟು ಅಲ್ಲಿ ಅವ್ಯವಹಾರ ನಡೆದಿದೆ ಏನು ಮಾಡುತ್ತಾರೆ ಗೊತ್ತಾಗುವುದಿಲ್ಲ. ಈಗ ಗೌರ್ನಮೆಂಟ್ ನೋಟಿಫಿಕೇಷನ್ ಒಂದನ್ನು ಅವರೇ ಮಾಡಿಕೊಂಡು ಗ್ರ್ಯಾಂಟ್ ತೆಗೆದುಕೊಂಡಿದ್ದಾರೆ ಎಂದರೆ ಇದುವರೆಗೆ ಯಾರೋ ಒಬ್ಬರ ಬಗ್ಗೆ ಏನು ಇಲ್ಲಿ ನಡೆಯಿತೋ ಇದು ಆ ರೀತಿ ಇದೆ. ಆದುದರಿಂದ ಇವೆಲ್ಲಾ ನೋಡಿದಾಗ ಖಾಸಗಿ ಶಿಕ್ಷಣ ಸಂಸ್ಥೆಗಳು ಏನು ಇವೆ ಅವುಗಳನ್ನು ಸಂಪೂರ್ಣವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಇಲ್ಲಿಯವರೆಗೆ ಯಾವುದೇ ಒಂದು ರೀತಿಯಲ್ಲಿ ಆ ಕಾರ್ಯ ಆಗಿಲ್ಲ ಎಂಬ ಮಾತನ್ನು ತಮಗೆ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಆಡಳಿತ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ತಮ್ಮ ಪುಣ್ಯ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಅದೃಷ್ಟವಂತರು ಅವರ ಅಧಿಕಾರಿಗಳು ಒಬ್ಬರಿಗಿಂತ ಒಬ್ಬರು ಒಳ್ಳೆಯವರು ಇದ್ದಾರೆ. ಒಳ್ಳೆಯ ದಕ್ಷರು ಇದ್ದಾರೆ, ಸೀನಿಯರ್ ಆಫೀಸರ್ ಇದ್ದಾರೆ. ನಿಮ್ಮ ಅದೃಷ್ಟಕ್ಕೆ ಸಾಕಷ್ಟು ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಇನ್ನು ಡಿ. ಪಿ. ಐ. ಆಫೀಸಿನ ವಿಷಯ ಹೇಳುತ್ತೇನೆ. ಆ ಇಲಾಖೆಯಲ್ಲಿ ವರ್ಗಾವಣೆ ವಿಷಯ ತೆಗದುಕೊಂಡರೆ ೨೦–೨೨ ವರ್ಷಗಳಿಂದ ಒಂದೇ ಕಡೆ ಇರತಕ್ಕ ಜನ ಅಲ್ಲಿ ಇದ್ದಾರೆ. ಇಲ್ಲಿ ನನ್ನ ಹತ್ತಿರ ಆ ಲಿಸ್ಟ್ ಇದೆ. ಟೇಬಲ್‌ನಿಂದ ಟೇಬಲ್‌ಗೆ, ರೂಮ್‌ನಿಂದ ರೂಮಿಗೆ, ಇಷ್ಟೆ ಅಲ್ಲಿ ವರ್ಗ ಅಂದರೆ. ಈ ರೀತಿ ವರ್ಗಾವಣೆ ಮಾಡುವ ಬದಲು ಅಲ್ಲಿರುವವರನ್ನು ಹೊರಗಡೆ ಕಳಹಿಸಿ, ಹೊರಗಡೆ ಇರುವವರನ್ನು ಇಲ್ಲಿಗೆ ತೆಗೆದುಕೊಂಡು ಸ್ವಚ್ಛ ಮಾಡಬೇಕು.

ಇನ್ನು ಅಕಾಡಮಿಸ್ ಬಗ್ಗೆ ಒಂದು ಮಾತನ್ನು ಹೇಳಬೇಕು ಎಂದು ಅಪೇಕ್ಷೆಪಡುತ್ತೇನೆ. ಈಗ ನಾಲ್ಕೈದು ಅಕಾಡಮಿಸ್ ಇವೆ. ಹಿಂದಿನ ಸಾರಿ ನಾನು ಹೇಳಿದ್ದೆ. ಈ ನಾಲ್ಕೈದು ಅಕಾಡಮಿಸ್‌ನ್ನು ಒಂದು ಮಾಡಿ ಎಂದು ಡಿಪಾರ್ಟ್‌ಮೆಂಟ್ ಮಾಡಬೇಕು ಎಂದು. ಅದನ್ನು ಬಿಟ್ಟು ಹತ್ತಾರು ಅಕಾಡಮಿಗಳು, ಹತ್ತಾರು ಅಧ್ಯಕ್ಷರು, ಹತ್ತಾರು ಕಾರ್ಯದರ್ಶಿಗಳು ಹೀಗೆ ಇರುವುದನ್ನು ತೆಗೆದು ಒಂದು ಡಿಪಾರ್ಟ್‌ಮೆಂಟ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ. ಈಗ ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ ಬೆಂಗಳೂರು ಒಂದು ಇದೆ. ಅದರ ಅವಶ್ಯಕತೆ ಏನು ಇದೆ? ಇದು ಯಾರು ನಡೆಸುತ್ತಿದ್ದಾರೆ? ಈ ಎಕನಾಮಿಕ್ ಚೇಂಜ್ ಎನ್ನತಕ್ಕದ್ದು ಒಂದು ದೊಡ್ಡ ರಾಕೆಟ್. ಇದಕ್ಕೆ ತಾವು ಮಾತ್ರ ಹೊಣೆಗಾರಿಕೆ ಅಲ್ಲ, ಅವರು ಎಲ್ಲಿ ಇದ್ದಾರೆ? ಅವರಿಗೆ ನಿಮ್ಮ ಮೇಲೆ ಇರತಕ್ಕ ಶ್ರೀಮತಿ ಇಂದಿರಾಗಾಂಧಿ, ಪ್ರಧಾನಮಂತ್ರಿ ಅವರ ನೇರವಾದ ಆಶೀರ್ವಾದ ಇದೆ. ಡೆಲ್ಲಿ ಎನ್ನುವುದು ಫೌಂಟನ್ ಹೆಡ್ ಆಫ್ ಕರಪ್ಷನ್, ನೆಪೋಟಿಸಮ್. ಅದಕ್ಕೆ ಸಾಕ್ಷಿ ಬೇಕಾದರೆ ಇದು ಒಂದು. ಇದನ್ನು ತಾವು ತಕ್ಷಣ ರದ್ದುಮಾಡಿ ನಮ್ಮ ಸರ್ಕಾರದಿಂದ ಕೊಡತಕ್ಕ ಗ್ರಾಂಟನ್ನು ನಿಲ್ಲಿಸಿ. ಇದರ ಬದಲು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಉದಾಹರಣೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಸ್ಟಿಟ್ಯೂಟ್ ಫಾರ್ ಸ್ಟಡಿ ಆಫ್ ಸೈಂಟಿಫಿಕ್ ಸೋಷಿಯಲಿಸಮ್ ಎಂದು ಮಾಡಿದ್ದಾರೆ. ಅದಕ್ಕೆ ಗ್ರಾಂಟನ್ನು ಕೊಡಿ. ಅದಕ್ಕೆ ನಾವು ಹೋದ ವರ್ಷದಿಂದ ಕೇಳಿದರು ಗ್ರಾಂಟ್ ಕೊಟ್ಟಿಲ್ಲ. ಏನು ಮಾಡಿದರೂ ಪ್ರಯೋಜನಕರವಾದ ಕೆಲಸ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕಡೆಯದಾಗಿ ಟೆಕ್ಸ್ಟ್ ಬುಕ್ಸ್‌ಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈಗ ಹೊಸ ವ್ಯವಸ್ಥೆ ಮಾಡಿದ್ದಾರೆ. ಪೂರ್ವದಲ್ಲಿ ಹಿಂದೆ ಪ್ರಕಟವಾದ ೬ನೇ ತರಗತಿ ಟೆಕ್ಸ್ಟ್ ಬುಕ್ಸ್ ಕೂಡ ತಂದಿದ್ದೇನೆ. ಒಂದನ್ನೊಂದು ಹೋಲಿಕೆ ಮಾಡಿ ನೋಡಬಹುದು.

ಇವು ಚಿಕ್ಕ ಮಕ್ಕಳಿಗೆ ಕೊಡತಕ್ಕಂಥ ಟೆಕ್ಸ್ಟ್ ಬುಕ್‌ಗಳು, ಮೈಸೂರು ಸರ್ಕಾರದ ಆರನೆಯ ಕ್ಲಾಸಿನ ಒಂದು ಪುಸ್ತಕದಲ್ಲಿ ಹೇಗೆ ಇದೆಯೆಂಬುದನ್ನು ನೋಡಬಹುದು. ರಗಳೆ ಎಂಬ ಒಂದು ಬಗ್ಗೆಯ ಪದ್ಯ ರೂಪವನ್ನು ಬರೆದಿದ್ದಾರೆ. ಇದು ಒಂದು. ಎರಡನೆಯದು, ಇಂಗ್ಲೀಷಿನಲ್ಲಿ ಒಂದು ಬುಕ್, ಇದು ಜಿಯಾಗ್ರಫಿ ಪುಸ್ತಕ, ಈ ಪುಸ್ತಕದಲ್ಲಿ ಪ್ರಿಂಟ್ ಸಹ ಇಲ್ಲ. ಅನೇಕ ಪೇಜ್‌ಗಳೇ ಖಾಲಿ ಇವೆ.

ಅಧ್ಯಕ್ಷರು.—ಹುಡುಗರು ಅಲ್ಲಿ ನೋಟ್ಸ್ ಬರೆದುಕೊಳ್ಳಲಿ ಎಂದು ಬಿಟ್ಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಂಥ ಒಂದು ವ್ಯವಸ್ಥೆಯನ್ನು ಟೆಕ್ಸ್ಟ್ ಬುಕ್‌ಗಳಲ್ಲಿ ಮಾಡಬಾರದು ಎಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರು ತಮ್ಮ ತೀವ್ರವಾದ ಗಮನವನ್ನು ಹರಿಸಬೇಕು.

ಗ್ರಂಥಾಲಯದ ಬಗ್ಗೆ ಮಾನ್ಯ ದೇವೇಗೌಡರು ಸಾಕಷ್ಟು ಹೇಳಿದ್ದಾರೆ. ಅಲ್ಲಿರತಕ್ಕ ಹಂಗಾಮಿ ನೌಕರರನ್ನು ಖಾಯಂಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲಿ ನ್ಯಾಯವಾದ ವಿಷಯವನ್ನು ತಿಳಿದು ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ತಾವು ಎಲ್ಲಿಯವರಿಗೆ ಶಿಕ್ಷಣ ಇಲಾಖೆಯ ಮಂತ್ರಿಗಳಾಗಿರುತ್ತೀರೋ ಅಷ್ಟರೊಳಗೆ ಶಿಕ್ಷಣದಲ್ಲಿ ಮೂಲಭೂತ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಇಲ್ಲದೇ ಹೋದರೆ ಖಂಡಿತವಾಗಿಯೂ ತಾವು ಇಷ್ಟು ಕಾಲದವರೆಗೂ ಇದ್ದು ಏನೂ ಮಾಡಿದಂತಾಗುವುದಿಲ್ಲ ಎಂದು ಹೇಳುತ್ತೇನೆ. ತಮ್ಮ ಗುಣ, ಪಾಂಡಿತ್ಯದ ಬಗ್ಗೆ ನನಗೆ ಹೊಟ್ಟೆ ಕಿಚ್ಚು ಇಲ್ಲ, ಒಂದು ರೀತಿಯಿಂದ ನನಗೆ ಸಂತೋಷವಾಗುತ್ತದೆ ತಮ್ಮ ಗುಣ ಬಹಳ ಒಳ್ಳೆಯದು, ಆದರೆ ಕೆಲಸ ಏನೂ ಆಗುತ್ತಿಲ್ಲ. ಆದ್ದರಿಂದ ನಾನು ತಮಗೆ ಒಂದು ಕಿವಿ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ತಮ್ಮ ಕೈಕೆಳಗೆ ಇರುವವರು ಸರಿಯಾಗಿ ಕೆಲಸ ಮಾಡುವಂತೆ ತಾವು ನೋಡಿಕೊಳ್ಳಬೇಕು, ಹಾಗೂ ವಿರೋಧಪಕ್ಷದವರು ಏನು ರಚನಾತ್ಮಕ ಸಲಹೆಗಳನ್ನು ಕೊಡುತ್ತಾರೋ ಅವುಗಳನ್ನು ತಾವು ಪರಿಗ್ರಹಿಸಿ ರಾಜ್ಯದ ಜನರಿಗೆ ಏನಾದರೂ ಒಂದು ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಣ).—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಆದರ್ಶ ವಿದ್ಯಾಸಚಿವರು ಮಂಡಿಸಿದಂಥ ಈ ಮಸೂದೆಗೆ ನನ್ನ ಬೆಂಬಲವನ್ನು ಕೊಡುತ್ತಾ ಕೆಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ಮಾತನಾಡಿದಂಥ ಮಾನ್ಯ ಲಿಂಗಪ್ಪನವರು ಇಂಗ್ಲೀಷ್ ಭಾಷೆಯ ಮುಂದುವರಿಕೆಯ ಬಗ್ಗೆ ಬಹಳ ಉಗ್ರವಾಗಿ ಮಾತನಾಡಿದ್ದಾರೆ. ನಾವು ಇಂಗ್ಲೀಷ್ ಕಲಿಯುವುದಕ್ಕೂ ಗುಲಾಮಗಿರಿಗೂ ಏನೇನು ಸಂಬಂಧವಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅನೇಕರು ಇಂಗ್ಲೀಷ್ ಬಗ್ಗೆ ಟೀಕೆ ಮಾಡುವಾಗ, ತಮ್ಮ ಮಕ್ಕಳನ್ನೇ ಅವರು ಕಾನ್ವೆಂಟ್ ಸ್ಕೂಲುಗಳಿಗೆ ಕಳುಹಿಸಿರುವುದನ್ನು ನಾನು ನೋಡಿದ್ದೇನೆ ಇಂಗ್ಲೀಷ್ ಒಂದು ಭಾಷೆ ಎಂದು ನಾವು ಕಲಿಯಬೇಕು. ನಾನು ಮಾತೃಭಾಷೆಯಲ್ಲಿಯೂ ವಿದ್ಯಾಭ್ಯಾಸ ಮಾಡಿಲ್ಲ, ಇಂಗ್ಲೀಷ್ ಭಾಷೆಯಲ್ಲಿಯೂ ವಿದ್ಯಾಭ್ಯಾಸ ಮಾಡಿಲ್ಲ ಆದರೆ ನನಗೆ ಇಂಗ್ಲೀಷ್ ಬಗ್ಗೆ ಸಾಕಷ್ಟು ಅಭಿಮಾನ ಇದೆ; ಮಾತೃಭಾಷೆಯ ಬಗ್ಗೆಯೂ ಸಾಕಷ್ಟು ಅಭಿಮಾನ ಇದೆ ನಮ್ಮ ಸಚಿವರು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ದುಡ್ಡನ್ನು ವ್ಯಯ ಮಾಡುತ್ತಿದ್ದಾರೆ. ಆದರೂ ಸಹ ಮೊನ್ನೆ ಸ್ಟೇಟ್ ಲೆವೆಲ್ ಅಡ್ವೈಸರಿ ಕಮಿಟಿಯಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕು ಎಂದು ಹೇಳಿದರು. ನಮ್ಮ ದೇಶ ಸಮೃದ್ಧಿಯಾದ ಕಾಲಕ್ಕೆ ಇತರ ಸಂಘ ಸಂಸ್ಥೆಗಳಿಗೂ ಹೆಚ್ಚಿನ ಧನ ಸಹಾಯವನ್ನು ಮಾಡಬಹುದು, ಆದರೆ ಈಗಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರಿಪ್ರೈಮರಿ ಎಜುಕೇಷನ್ ಪ್ರೈಮರಿ ಎಜುಕೇಷನ್ ಅನ್ನು ಸಹ ನಾವು ಸಮರ್ಪಕವಾಗಿ ಕೊಡುವಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ ಎನ್ನುವುದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಒಬ್ಬ ವಿದ್ಯಾರ್ಥಿ ಮೆಡಿಕಲ್ ಕಾಲೇಜಿಗೆ ಅಪ್ಲಿಕೇಷನ್ ಹಾಕಬೇಕಾದರೆ, ನರ್ಸರಿ ಸ್ಕೂಲಿನಿಂದಲೂ ಈಗ ಸರ್ಟಿಫಿಕೇಟುಗಳನ್ನು ಕೊಡಬೇಕು; ಎಂದು ಹೇಳುತ್ತಾರೆ. ಇಂಥ ಸರ್ಟಿಫಿಕೇಟುಗಳನ್ನು ಅವನು ಎಲ್ಲಿಂದ ತರಬೇಕು ? ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಪ್ರಿಪ್ರೈಮರಿ ಎಜುಕೇಷನ್‌ಗೆ ಮತ್ತು ಪ್ರೈಮರಿ ಎಜುಕೇಷನ್‌ಗೆ ಇನ್ನಷ್ಟು ಹಣ ಖರ್ಚು ಮಾಡಬೇಕು ಎಂದು ನಾನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಈ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡತಕ್ಕದ್ದು ನಮ್ಮ ಸರ್ಕಾರದ ಕರ್ತವ್ಯವಾದರೂ ಕೂಡ ಇದನ್ನು ಶೇಕಡ ೮೦ ರಷ್ಟು ಆದರೂ ಜಾರಿಯಲ್ಲಿ ತರುವುದಕ್ಕೆ ಸಾಧ್ಯವಾಗಿಲ್ಲ ಹಳ್ಳಿಗಳಲ್ಲಿ ಇವತ್ತು ಲಕ್ಷಾಂತರ ಮಕ್ಕಳಿಗೆ ಪ್ರಾಥಮಿಕ ಅಭ್ಯಾಸ ಇಲ್ಲ. ಒಂದುವೇಳೆ ಅವರು ಸ್ಕೂಲಿಗೆ ಬಂದರೆ ಉಪಾಧ್ಯಾಯರ ಕೊರತೆ ಇದೆ. ಕಳೆದ ವರ್ಷ ಹಣಕಾಸಿನ ಸಚಿವರು, ವಿದ್ಯಾ ಇಲಾಖೆಗೆ ಬಡ್ಜೆಟ್ಟಿನಲ್ಲಿ ಕತ್ತರಿ ಪ್ರಯೋಗ ಮಾಡುವುದಿಲ್ಲ ಎಂದು ಹೇಳಿದ್ದರು. ನನ್ನ ತಾಲ್ಲೂಕಿನಲ್ಲಿ ಏಳು ಏಕ ಉಪಾಧ್ಯಾಯರ ಶಾಲೆಗಳು ಇವೆ. ಏಳು ತರಗತಿಗಳು ಇರುವ ಶಾಲೆಗಳಲ್ಲಿ ಕೇವಲ ಮೂರು ಜನ ಉಪಾಧ್ಯಾಯರು ಇದ್ದಾರೆ ಇದರಲ್ಲಿ ಒಬ್ಬರನ್ನು ಟ್ರೈನಿಂಗ್‌ಗೆ ಡೆಪ್ಯೂಟ್ ಮಾಡಿರುತ್ತಾರೆ. ಈ ರೀತಿಯಾದ ಪಕ್ಷದಲ್ಲಿ ನಾವು ವಿದ್ಯಾಭ್ಯಾಸದ ಗುಣಮಟ್ಟವನ್ನು ಯಾವರೀತಿ ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾವು ಯೋಜನೆ ಮಾಡಬೇಕು. ಕೆಲವು ಕಾನ್‌ವೆಂಟ್ ಸ್ಕೂಲುಗಳಿಗೆ ಮಕ್ಕಳನ್ನು ಎಲ್ಲರೂ ಸೇರಿಸುವುದು ಮತ್ತು ಅಲ್ಲಿಯ ನೂಕು ನುಗ್ಗಲಿಗೆ ಕಾರಣ ಅಲ್ಲಿ ಕೊಡತಕ್ಕ ಉತ್ತಮ ಶಿಕ್ಷಣವೇ ಕಾರಣವಾಗಿದೆ, ಅಷ್ಟು ಇಲ್ಲದಿದ್ದರೆ ಏನು ನಮ್ಮ ಮಕ್ಕಳಿಗೆ ಹೆಚ್ಚು ಫೀಸು ಕೊಟ್ಟಾದರೂ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು ಎನ್ನುವ ಮನೋಭಾವನೆ ಜನರಲ್ಲಿ ಎದ್ದು ಕಾಣುತ್ತದೆ. ಇದನ್ನು ನಾವು ಯಾರೂ ಮರೆಯಬಾರದು. ಆದ್ದರಿಂದ ಸರ್ಕಾರದವರು ಮುಖ್ಯವಾಗಿ ಪ್ರೈಮರಿ ಶಿಕ್ಷಣದಿಂದ ಸೆಕೆಂಡರಿ ಶಿಕ್ಷಣದವರೆಗೆ ದಯವಿಟ್ಟು ಹೆಚ್ಚಿನ ಗಮನವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಇದೇ ಸಂದರ್ಭದಲ್ಲಿ ಸರ್ಕಾರದವರು ತಾಲ್ಲೂಕು ಬೋರ್ಡು ಮತ್ತು ಮುನಿಸಿಪಲ್ ಹೈಸ್ಕೂಲು ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈ ಕಟ್ಟಡಗಳು ೬-೭ ವರ್ಷದಿಂದ ಸುಣ್ಣ ಬಣ್ಣ ನೋಡಿಲ್ಲ, ರಿಪೇರಿ ಕೆಲಸವನ್ನು ಮುಂದೆ ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ ಈ ರೀತಿಯಾದರೆ ರಿಪೇರಿ ಮಾಡಿಸುವ ಕಾಲಕ್ಕೆ ಒಂದಕ್ಕೆ ಎರಡರಷ್ಟು ಖರ್ಚನ್ನು ಸರ್ಕಾರದವರೇ ಕೊಡಬೇಕಾಗುತ್ತದೆ. ಈ ಸ್ಕೂಲ್ ಕಟ್ಟಡಗಳನ್ನು ಸರ್ಕಾರದವರು ಜಾಗ್ರತೆಯಾಗಿ ರಿಪೇರಿ ಮಾಡದೇ ಹೋದರೆ ಅಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೂ ಸಾಧ್ಯವಿಲ್ಲ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇಂಥ ಪರಿಸ್ಥಿತಿಯಲ್ಲಿಯೂ ಅನೇಕ ಸ್ಕೂಲುಗಳಲ್ಲಿ ಸ್ಪೋರ್ಟ್ಸ್ ಫೀಜು ಮತ್ತು ರೀಡಿಂಗ್ ರೂಂ ಫೀಜು ಏನು ಇದೆ ಅದು ಆಯಾ ವರ್ಷದ್ದು ಆಯಾ ವರ್ಷವೇ ಖರ್ಚಾಗಬೇಕು. ಆದರೆ ಇದು ನಾನಾ ಕಾರಣಗಳಿಂದ ಅನೇಕ ವರ್ಷಗಳಿಂದ ಅಕ್ಯುಮ್ಯುಲೇಟ್ ಆಗುತ್ತಾ ಬರುತ್ತಿದೆ ಇದರ ಬಗ್ಗೆ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡು ಈ ದುಡ್ಡನ್ನು ಶಾಲೆಗಳಿಗೆ ಬೇಕಾಗುವ ಇತರೆ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕಾಗದರೂ ಅವಕಾಶ ಮಾಡಿಕೊಡಬೇಕು. ಹೀಗೆ ಹಣವನ್ನು ಅಕ್ಯುಮ್ಯುಲೇಟ್ ಆಗಿ ಇರುವುದಕ್ಕೆ ಮೊದಲು ಶಾಲಾ ಮಕ್ಕಳಿಗೆ ಉಪಯೋಗವಾಗುವ ರೀತಿಯಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ನಾವು ಕಮಿಟಿಗಳಲ್ಲಿ ಇದರ ಬಗ್ಗೆ ರೆಸಲ್ಯೂಷನ್ ಮಾಡಿ ಕಳುಹಿಸುತ್ತೇವೆ ಇದನ್ನು ತಾವು ಪರಿಶೀಲನೆ ಮಾಡಬೇಕು. ನಿಜವಾಗಿಯೂ ಈ ಹಣ ಹಾಗೆಯೇ ಇರುತ್ತದೆ. ಅವರು ನಿಗದಿಯಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತಾರೆ. ಆದರೂ ಸಹ ಇವರಲ್ಲಿ ಶೇಕಡ ೭೦ ರಷ್ಟು ಹಣ ಖರ್ಚಾಗದೆ ಉಳಿದು ಪ್ರತಿ ವರ್ಷವೂ ಇದಕ್ಕೆ ೩೦ ಪರ್ಸೆಂಟ್ ಹಣ ಅಕ್ಯುಮ್ಯುಲೇಟ್ ಆಗುತ್ತಾ ಹೋಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

1-00 P. M.

ಮತ್ತೆ ಇನ್ನೊಂದು ವಿಚಾರವೇನೆಂದರೆ, ನಮ್ಮ ಇಡೀ ರಾಜ್ಯದಲ್ಲಿಯೇ ಆರ್ಕಿಟೆಕ್ಚರ್ ಕೋರ್ಸ್ ಒಂದೇ ಒಂದು ಕಾಲೇಜಿನಲ್ಲಿರುವುದು ಅದು ಬೆಂಗಳೂರಿನಲ್ಲಿರುವ ಆರ್ಕಿಟೆಕ್ಚರ್ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಬೇರೆ ಎಲ್ಲಿಯೂ ಇಲ್ಲವೇ ಇಲ್ಲ ಇವತ್ತಿನ ದಿನ ಆರ್ಕಿಟೆಕ್ಚರ್‌ನ ಬೆಲೆ ಏರುತ್ತಿರುವುದರಿಂದ ಉನ್ನತಮಟ್ಟದ ಆರ್ಕಿಟೆಕ್ಚರ್ಸ್‌ನ್ನು ಮುಂದಕ್ಕೆ ತರಬೇಕಾದ್ದು ನಮ್ಮ ಕರ್ತವ್ಯ. ಇವತ್ತು ಈ ಡಿಪಾರ್ಟ್‌ಮೆಂಟ್ ಆಫ್ ಆರ್ಕಿಟೆಕ್ಚರ್‌ನಲ್ಲಿ ಸಾಕಷ್ಟು ನ್ಯೂನ್ಯತೆಗಳು ಇವೆ ಎನ್ನುವುದು ತಮ್ಮ ಗಮನಕ್ಕೂ ಬಂದಿರಬಹುದು. ಆದುದರಿಂದ ಇದರ ಬಗ್ಗೆ ತಾವು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ತಾವು ಇದರಲ್ಲಿ ಹೆಚ್ಚಿನ ಒಂದು ಶ್ರದ್ಧೆಯನ್ನು ತೆಗೆದುಕೊಳ್ಳಬೇಕು ಇವತ್ತು ಆರ್ಕಿಟೆಕ್ಚರ್ ಕೋರ್ಸ್ ಮಾಡಿದವರು, ಅದೇ ಕೋರ್ಸಿನ ಹುಡುಗರಿಗೆ ಪಾಠ ಹೇಳುವುದೇ ಒಂದೇ ಗುರಿಯಾಗಿ ಬೆಳೆದಿದೆ. ಆದುದರಿಂದ ಆರ್ಕಿಟೆಕ್ಚರ್‌ನಲ್ಲಿರತಕ್ಕಂಥ ತಜ್ಞರನ್ನು ಕಾಲೇಜ್ ಸ್ಟಾಫ್ ಆಗಿ ತೆಗೆದುಕೊಂಡು ಅದರಲ್ಲಿರತಕ್ಕಂಥ ನ್ಯೂನ್ಯತೆಗಳನ್ನು ಪರಿಹಾರ ಮಾಡಿ ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತಿದ್ದೇನೆ ಇನ್ನು ಈ ಎಜುಕೇಷನ್ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ ನಾನು ಶ್ರೀಮತಿ ದಿವಂಗತರಾದ ಜಯಲಕ್ಷ್ಮಮ್ಮಣ್ಣಿಯರ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ, ಕರ್ನಾಟಕ ಯೂನಿವರ್ಸಿಟಿಯಲ್ಲಿ ಇಂಥ ಕುಂದುಕೊರತೆಗಳನ್ನು ಅಥವಾ ನ್ಯೂನತೆಗಳನ್ನು ಸರಿಪಡಿಸುವುದಕೋಸ್ಕರ ಶ್ರೀಮಾನ್ ನಮ್ಮ ಹಿರಿಯ ವಿದ್ಯಾಮಂತ್ರಿಗಳಾಗಿದ್ದಂಥ ಬದರೀನಾರಾಯಣರವರು ಸಿರ್ವಂಚನೆಯಿಂದ ಕೆಲಸ ಮಾಡತಕ್ಕಂಥವರನ್ನು ಅಲ್ಲಿಗೆ ಹಾಕಿದಾಗಲೂ ಕೂಡ ವಿರೋಧ ಪಕ್ಷದವರು, ಸ್ವಜನ ಪಕ್ಷಪಾತ ಅಥವಾ ಮುಖ್ಯಮಂತ್ರಿಗಳು ಅವರವರ ಜನರನ್ನೇ ವೈಸ್ ಚಾನ್ಸಲರನ್ನಾಗಿ ಮಾಡಿದ್ದಾರೆ ಎನ್ನು ಕೂಗು ಸಿಕ್ಕಾಬಟ್ಟೆ ಬಂತು. ಆ ವಿಷಯವನ್ನು ಇವತ್ತು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ಶ್ರೀ ಬಿ ಪುಟ್ಟಸ್ವಾಮಯ್ಯ.—ನೀವು ಹೆಣ್ಣುಮಕ್ಕಳೆಲ್ಲಾ ಸೇರಿ ಮಂತ್ರಿಮಂಡಲವನ್ನು ಕರ್ನಾಟಕದಲ್ಲಿ ರಚಿಸಬೇಕೆಂದು ಮೊದಲೇ ನಾನು ಹೇಳಿದ್ದೇನೆ. ಅದರ ಬಗ್ಗೆ ತಮ್ಮ ಶ್ಲಾಘನೆಯೇ ಇಲ್ಲ.

ಶ್ರೀಮತಿ ದಮಯಂತಿ ಬೋರೆಗೌಡ.—ಶ್ಲಾಘನೆ ಮಾಡುತ್ತೇನೆ. ಆದರೆ ನಾನು ಮಂಡ್ಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಹೋದಾಗ ಅವರು ಹೇಳಿದರು ಈ ರೀತಿ ಮಾನ್ಯ ಬದರೀ ನಾರಾಯಣರವರು ನನ್ನನ್ನು ವೈಸ್ ಚಾನ್ಸಲರ್ ಆಗಿ ಮಾಡಿದ್ದಕ್ಕೆ ಜನ ಹೀಗೆ ಮಾತನಾಡಿ ಕೊಳ್ಳುತ್ತಿದ್ದಾರೆಂದು ಅವರು ನೊಂದ ಮನಸ್ಸಿನಿಂದ ನನ್ನ ಜೊತೆಯಲ್ಲಿ ಹೇಳಿಕೊಂಡರು ಅವರು ಒಮ್ಮೆ ಧಾರವಾಡದಿಂದ ಮೈಸೂರಿಗೆ ಬರುವುದಕ್ಕೆ ಯೂನಿವರ್ಸಿಟಿ ಕಾರೂ ಇದ್ದರೂ ಕೂಡ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದಾರೆ. ಇವತ್ತು ನಮ್ಮ ಅಧ್ಯಕ್ಷರ ಹಾಗೆ ಹೆಣ್ಣುಮಕ್ಕಳು ಯಾವ ಜವಾಬ್ದಾರಿ ಸ್ಥಾನವನ್ನು ಕೊಟ್ಟರೂ ಕೂಡ ಸರಿಯಾಗಿ ನಿರ್ವಹಿಸುತ್ತಾರೆ ಎಂಬುದಕ್ಕೆ ನಮ್ಮ ಅಧ್ಯಕ್ಷರೇ ಸಾಕ್ಷಿಯಾಗಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ರಾಜ್ಯದಲ್ಲಿರತಕ್ಕಂಥ ಹೆಣ್ಣುಮಕ್ಕಳೆಲ್ಲಾ ಒಗ್ಗಟ್ಟಾಗಿ ಇವರನ್ನೆಲ್ಲಾ ಓಡಿಸಿ ನೀವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. ನೀವೆಲ್ಲಾ ಹಾಗೆ ಮಾಡಿದರೆ ನನಗೆ ತುಂಬಾ ಸಂತೋಷ.

ಶ್ರೀಮತಿ ದಮಯಂತಿ ಬೋರೇಗೌಡ.—ಅವರು ಯಾವ ಒಂದು ಪ್ರಭಾವಕ್ಕೂ ಒಳಗಾಗದೆ ಮಾಡಿರತಕ್ಕಂಥ ಸೇವೆಯನ್ನು ನಾವೆಲ್ಲರೂ ಸ್ಮರಿಸತಕ್ಕಂಥದ್ದು ಆಗಿದೆ. ಇನ್ನು ಇವತ್ತು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಇವತ್ತು ಕನ್ನಡಕ್ಕೆ ಪ್ರಶಸ್ತ್ಯ ಕೊಡಬೇಕು, ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಕನ್ನಡ ಮುಂದುವರಿಯ ಬೇಕಾದರೆ ಕನ್ನಡ ಬರತಕ್ಕಂಥ ಜನರು ಕನ್ನಡ ಶಾಲೆಗಳನ್ನೇ ಹುಡುಕಿಕೊಂಡು ಹೋಗಿ ಮಕ್ಕಳನ್ನು ಶಾಲೆಗೆ ಸೇರಿಸಬೇಕು. ಇವತ್ತು ಕನ್ನಡದಲ್ಲಿ ಸರಿಯಾದ ವ್ಯಾಕರಣವಿಲ್ಲದೇ ಇರುವುದರಿಂದ ನಮ್ಮ ಭಾಷೆಯ ಸ್ಟ್ಯಾಂಡರ್ಡ್ ದಿನೇ ದಿನೇ ಕುಸಿಯುತ್ತಿದೆಂದು ಹೇಳಿದರೆ ತಪ್ಪಾಗಲಾರದು. ಸ್ವಾಮಿ ಇನ್ನು ನಾನ್ ಡಿಟೇಲ್ ಟೆಕ್ಸ್ಟ್ ಪುಸ್ತಕಗಳನ್ನು ಮಾಡಬೇಕಾದರೆ ಉತ್ತಮವಾದ ಪುಸ್ತಕಗಳನ್ನು ನಮ್ಮ ಮಕ್ಕಳು ಓದುವ ರೀತಿಯಲ್ಲಿ ಮಾಡಿ ನಾನ್ ಡಿಟೇಲ್ ಪುಸ್ತಕಗಳನ್ನು ಮಾಡಿದ್ದಾರೆ ಅದನ್ನು ನಾನು ಓದಿದ್ದೇನೆ, ಅದನ್ನು ಓದಿದರೆ ನಮಗೂ ಕೂಡ ಜಿಗುಪ್ಸೆ ಬರುವಂಥ ಪರಿಸ್ಥಿತಿ ಕೂಡ ಇದೆ. ಇಷ್ಟು ವಿಷಯವನ್ನು ಹೇಳಿ ಇಲ್ಲಿಯವರೆಗೆ ಮಾತನಾಡಲೂ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಮಾನ್ಯ ಅಧ್ಯಕ್ಷಣೀಯವರೇ, ಈ ದಿನ ನಮ್ಮ ಮಾನ್ಯ ವಿದ್ಯಾಮಂತ್ರಿಗಳು ಮಂಡಿಸಿರತಕ್ಕಂಥ ೯೨ ಕೋಟಿ ೩೮ ಲಕ್ಷ ರೂಪಾಯಿಗಳ ಬೇಡಿಕೆಯನ್ನು ಅನುಮೋದಿಸುತ್ತಾ, ಪುಷ್ಟೀಕರಿಸುತ್ತಾ ಕೆಲವು ಮೂಲಭೂತವಾದ ಸಲಹೆಯನ್ನು ತಮ್ಮ ಮುಂದಿಡಲಿಕ್ಕೆ ಇಚ್ಛೆಪಡುತ್ತೇನೆ. ವಿದ್ಯಾ ಮಂತ್ರಿಗಳೇನೋ ಎಲ್ಲರ ಮೆಚ್ಚಿಕೆಯನ್ನು ಪಡೆದರು, ಆದರೆ ಜ್ಯಾತ್ಯಾತೀತ ರಾಷ್ಟ್ರ, ಸಮಾಜವಾದಿ ಸಮಾಜ ಮತ್ತು ಸಾಮಾಜಿಕ ನ್ಯಾಯ ದೊರಕಿಸತಕ್ಕಂಥ ಬಡ್ಜೆಟನ್ನು ರೂಪಿಸಬೇಕಾಯಿತ್ತು. ನಮ್ಮ ರಾಜ್ಯದಲ್ಲಿ ೩೨ ಸಾವಿರದ ೮೮೦ ಪ್ರಾಥಮಿಕ ಶಾಲೆಗಳಿದೆ ಇದರಲ್ಲಿರತಕ್ಕಂಥ ವಿದ್ಯಾರ್ಥಿಗಳ ಪೈಕಿ ನಿರ್ಗತಿಕರು ಮಕ್ಕಳು, ಶೆಡ್ಯೂಲ್ ಕ್ಯಾಸ್ಟ್ ಮಕ್ಕಳು ಎಷ್ಟು ಜನರಿದ್ದಾರೆ ? ಇವತ್ತು ನಮ್ಮ ರಾಜ್ಯದಲ್ಲಿ ಅಕ್ಷರಸ್ಥರು ೩೧–೪ ಪರ್ಸೆಂಟ್ ಇದ್ದರೆ ಅದರಲ್ಲಿ ಶೆಡ್ಯೂಲ್ ಟ್ರೈಬ್ಸ್‌ನವರು, ನಿರ್ಗತಿಕರು ೧ ಪರ್ಸೆಂಟ್ ಇದ್ದಾರೆ. ಸ್ವಾತಂತ್ರ್ಯ ಬಂದು ೨೭ ವರ್ಷವಾದರೂ ಅವರು ಏತಕ್ಕೆ ಮುಂದಕ್ಕೆ ಬರಲಿಲ್ಲ, ನ್ಯಾಯವನ್ನು ಏತಕ್ಕೆ ದೊರಕಿಸಲಿಲ್ಲ ? ಸುಮಾರು ೬೬ ಪರ್ಸೆಂಟ್ ಅವಿದ್ಯಾವಂತರು ಇರತಕ್ಕಂಥ ರಾಜ್ಯದಲ್ಲಿ ದಲಿತವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಹರಿಜನ ಗಿರಿಜನಮಕ್ಕಳಿಗೆ ಯಾವುದೇ ಒಂದು ಅನುಕೂಲತೆಗಳನ್ನು ಮಾಡಿಲ್ಲ. ಅವರಿಗೇನು ಮಾಡಬೇಕಾಗಿದೆಂದರೆ ಹೆಚ್ಚು ಹೆಚ್ಚು ಶಾಲಾ ಮಂದಿರಗಳನ್ನು, ಶಿಶು ವಿಹಾರಗಳನ್ನು ಪ್ರತಿ ವರ್ಷಕ್ಕೆ ಒಂದು ಸಾವಿರದಂತೆ ತೆಗೆಯಬೇಕು. ೯೨ ಕೋಟಿಯಲ್ಲಿ, ಪ್ಲಾನಿಂಗ್ ಕಮಿಷನ್ ಪ್ರಕಾರ ಸಬ್ ಪ್ಲಾನ್ ಮಾಡಿ ಅದರಲ್ಲಿ ಸುಮಾರು ೧೮–೨೦ ಪರ್ಸೆಂಟ್ ಹಣವನ್ನು ಇದಕೋಸ್ಕರ ಇರಿಸಿ ವಿಶೇಷವಾದಂಥ ಯೋಜನೆಯನ್ನು ಮಾಡಿ ಬಡವರ ಮಕ್ಕಳ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು ಎನ್ನತಕ್ಕಂಥ ಸಲಹೆಯನ್ನು ಮಾಡುತ್ತಿದ್ದೇನೆ. ಪ್ರತಿ ಡಿಸೆಂಬರ್‌ನಲ್ಲೂ ಪ್ರಾಥಮಿಕ ಶಾಲೆಗಳಲ್ಲಿ ಸೇರತಕ್ಕಂಥ ಮಕ್ಕಳ ಗಣತಿಯನ್ನು ಮಾಡುತ್ತಿದ್ದೀರಿ. ಆಗ ೧೦೦ಕ್ಕೆ ೯೪ ಮಕ್ಕಳು ಸೇರುತ್ತಾರೆ. ಇನ್ನು ೬ ಮಕ್ಕಳು ಯಾರು ಎಂಬುದು ನಿಮಗೆ ಲೆಕ್ಕಕ್ಕೆ ಸಿಗುವುದಿಲ್ಲ. ಅವರು ಯಾರೆಂದರೆ ನಿರ್ಗತಿಕ ಮಕ್ಕಳು, ಬಡವರ ಮಕ್ಕಳು, ಪರಾವಲಂಬಿ ಜೀವನ ನಡೆಸತಕ್ಕಂಥವರು ಹರಿಜನರು ಗಿರಿಜನರ ಮಕ್ಕಳು ಇವರಿಗಾಗಿ ನೀವು ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಇಂಗ್ಲೆಂಡಿನಲ್ಲಿದ್ದಂತೆ ಮೇನ್ ಟೆನೆನ್ಸ್ ಗ್ರ್ಯಾಂಟ್ ಕೊಡಿ. ಮಾನ್ಯ ನರಸಿಂಹ ರಾಜ ಒಡೆಯರು ಇದ್ದಾಗ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆ, ವಸತಿ, ಪುಸ್ತಕ ಬಳಪ ಸ್ಲೇಟ್ ಎಲ್ಲಾವನ್ನೂ ಕೊಡುತ್ತಿದ್ದರು ಹಾಗೆ ಇವತ್ತು ನೀವು ಅವರ ವಿದ್ಯಾಭ್ಯಾಸ ಮಾಡಲು ಇಂಥ ಯೋಜನೆಗಳನ್ನು ತರಬೇಕು ದೊಡ್ಡ ದೊಡ್ಡ ಹಾಸ್ಟಲ್‌ಗಳನ್ನು ಕಟ್ಟಿಸಿ. ಮತ್ತೆ ಎಲ್ಲೆಲ್ಲಿ ರೆಸಿಡೆನ್ಸಿಯಲ್ ಶಾಲೆಗಳಿರುತ್ತವೆ ಅಂಥ ಕಡೆ ಹಾಸ್ಟಲ್‌ಗಳನ್ನು ಕಟ್ಟಿಸಿಕೊಡಿ. ಮತ್ತೆ ಹೆಣ್ಣುಮಕ್ಕಳ ಶಾಲೆಗಳಿಗೆ ಇನ್ನು ಹೆಚ್ಚಿನ ಪ್ರೋತ್ಸಾಹ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಇಷ್ಟು ಮಾಡದೇ ಹೋದರೆ ಸಮಾಜಿಕ ನ್ಯಾಯ ದೊರಕಿಸತಕ್ಕಂಥ ಶಿಕ್ಷಣವನ್ನು ನೀವು ಕೊಟ್ಟಹಾಗೆ ಆಗುವುದಿಲ್ಲ. ಇನ್ನು ಶ್ರೀರಂಗಚಾರಿ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಹಾಸ್ಟಲ್‌ಗಳು ಯಾವಯಾವರೀತಿ ಇರಬೇಕು ಎನ್ನುವ ಬಗ್ಗೆ ಹೇಳಿದ್ದಾರೆ ೯೩ ಕೋಟಿ ರೂ. ಗಳಲ್ಲಿ ಸುಮಾರು ೨೦ ಕೋಟಿ ರೂಪಾಯಿಗಳಿಗೆ ಒಂದು ಸಬ್ ಪ್ಲಾನ್ ಮಾಡಿ ಕೊಡಿ. ಈಗಾಗಲೇ ಅವರ ವರದಿಯನ್ನು ತಮಗೆ ಅರ್ಪಿಸಿದ್ದಾರೆ ಅದನ್ನು ತಾವು ಕೂಡಲೇ ಪರಿಶೀಲನೆ ಮಾಡಿ ವಿಶೇಷವಾದಂಥ ಯೋಜನೆಗಳನ್ನು ಮಾಡಿ, ಆ ಮಕ್ಕಳಿಗೆ ಈ ಒಂದು ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಸ್ವಾಮಿ, ಈ ಬಗ್ಗೆ ಇನ್ನೊಂದು ವಿಷಯ ಹೇಳುವುದಾದರೆ ಕಾಲೇಜುಗಳಲ್ಲಿ ಡಿಪ್ರೆಸ್ಡ್ ಕ್ಲಾಸ್ ಲೈಬ್ರರೀಸ್ ಅಂತ ಒಂದು ವಿಭಾಗ ಮಾಡಿ ಅದರಲ್ಲಿ ಮೆಡಿಕಲ್ ಕಾಲೇಜು ಸ್ಟೂಡೆಂಟ್ಸ್‌ಗೆ ಇಂಜಿನೀಯರಿಂಗ್ ಸ್ಟೂಡೆಂಟ್ಸ್‌ಗೆ ಮತ್ತು ಹೈಯ್ಯರ್ ಸ್ಟಡೀಸ್ ಮಾಡುವವರಿಗೆ ಟೆಕ್ಸ್ಟ್ ಬುಕ್ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡ ಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ವಿಮೆನ್ ಎಜುಕೇಷನ್‌ಗೆ ಹೆಚ್ಚು ಹೆಚ್ಚಾಗಿ ರೆಸಿಡೆನ್ಶಿಯಲ್ ಹೈಸ್ಕೂಲ್‌ನ್ನು ಪ್ರತಿ ಜಿಲ್ಲೆಯಲ್ಲೂ ತೆರೆಯಬೇಕು ಎಂದು ಹೇಳುತೇನೆ ಮತ್ತು ಈಗ ೧೧ ಹಾಸ್ಟಲುಗಳು ಇವೆ ಅದು ಸಾಲದು ೨೫ ಹಾಸ್ಟಲುಗಳನ್ನು ಕಟ್ಟಬೇಕು. ಅದರಲ್ಲಿ ಟೆಕ್ನಿಕಲ್ ಮತ್ತು ನಾನ್ ಟೆಕ್ನಿಕಲ್ ಇರಬೇಕು, ಮತ್ತು ಜೂನಿಯರ್ ಕಾಲೇಜುಗಳು ಎಲ್ಲಿಲ್ಲಿ ಇವೆಯೊ ಅಲ್ಲೆಲ್ಲಾ ಈ ಹಾಸ್ಟೆಲ್‌ಗಳನ್ನು ಕಟ್ಟಬೇಕು ಮಿಡಲ್ ಮತ್ತು ಹೈಸ್ಕೂಲ್‌ನಲ್ಲಿ ಓದುತ್ತಾ ಇರತಕ್ಕಂಥ ಈ ಮಕ್ಕಳಿಗೆ ಹಾಸ್ಟಲನ್ನು ತೆರೆಯಬೇಕು ಮತ್ತು ಈಗ ನೀವು ಡಿಪ್ರೆಸ್ಡ್ ಕ್ಲಾಸ್‌ಗೆ ಕೊಡತಕ್ಕಂತ ಹಣದಿಂದ ಏನೂ ಉಪಯೋಗವಾಗುತ್ತಾ ಇಲ್ಲ. ಏತಕ್ಕೆಂದರೆ ಅವರಲ್ಲಿ ಪರೀಕ್ಷೆಗೆ ೧೦೦ಕ್ಕೆ ೭೦-೮೦ ಜನ ಪರೀಕ್ಷೆಯಲ್ಲಿ ಫೇಲಾಗುತಿ ದ್ದಾರೆ, ಆದುದರಿಂದ ಅವರಿಗೆ ಅನುಕೂಲವಾಗುವ ಹಾಗೆ ಒಂದು ಉತ್ತಮ ವಿದ್ಯಾಭ್ಯಾಸವಾಗುವ ಹಾಗೆ ಒಂದು ವಿಶೇಷವಾದ ಯೋಜನೆ ಮಾಡಿ ಎಲ್ಲಾ ಮಟ್ಟದಲ್ಲೂ ಅವರುಗಳಿಗೆ ಕೋಚಿಂಗ್ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಿದ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ದುರ್ಬಲವರ್ಗದರಿಗೆ ಫಾರಿನ್ ಸ್ಕಾಲರ್‌ಷಿಪ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಸರಿಯಾಗಿ ಕೊಡುವ ವ್ಯವಸ್ಥೆ ಮಾಡಬೇಕು ಮತ್ತು ಆಟಾಮಿಕ್ ಎನರ್ಜಿಯಲ್ಲಿ ಈ ವಿದ್ಯಾರ್ಥಿಗಳಿಗೆ ವಿಶೇಷವಾದ ತರಬೇತಿಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಐ. ಎ. ಎಸ್. ಮತ್ತು ಎಂ. ಎ. ಎಸ್. ಹೋಗುವ ವಿದ್ಯಾರ್ಥಿಗಳಿಗೆ ಹೆಚ್ಚಿಗೆ ಸೆಂಟರುಗಳನ್ನು ತೆರೆದು ಅನುಕೂಲಮಾಡಿ ಕೊಡಬೇಕು, ನಾನು ಈ ಮಾತು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ದುರ್ಬಲವರ್ಗದ ವಿದ್ಯಾರ್ಥಿಗಳಿಗೆ ಬಗ್ಗೆ ಒಂದು ವಿಶೇಷವಾದ ಯೋಜನೆ ಹಾಕಿ ಅವರನ್ನು ಮುಂದಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಉದ್ದೇಶದಿಂದ. ಹಾಗಾದರೆ ಅವನು ಉತ್ತಮ ಪೌರನಾಗುತ್ತಾನೆ ಮತ್ತು ದೇಶಕ್ಕೂ ಕಲ್ಯಾಣವಾಗುತ್ತದೆ. ನಿಮ್ಮನ್ನು ನೋಡಿದರೆ ಸುಂದರವಾದ ಬ್ರಾಹ್ಮಣರಾಗಿ ಕಾಣುತ್ತೀರಿ ಅದರಂತೆ ಈ ಜನರನ್ನೂ ಉತ್ತಮ ಬ್ರಾಹ್ಮಣರನ್ನಾಗಿ ಮಾಡಬೇಕು. ಈಗ ನೀವು ಅವರಿಗೆ ಕೊಡುತ್ತಿರುವ ಸಹಾಯ ಅಷ್ಟಾಗಿ ಸಾಲದು ಆದುದರಿಂದ ನಾನು ಈಗ ಅಪಾದನೆ ಮಾಡುತ್ತಿದ್ದೇನೆ ಆದುದರಿಂದ ತಾವು ಈ ದುರ್ಬಲವರ್ಗದವರಿಗೆ ಒಂದು ವಿಶೇಷವಾದ ಯೋಜನೆ ಹಾಕಿಕೊಂಡು ಒಂದಡು ಹೆಚ್ಚಿನ ರೀತಿಯಲ್ಲಿ ಈ ಜನಾಂಗಕ್ಕೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಐದು ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ- ಎಲ್ಲಾ ಸದಸ್ಯರು ಬರೇ ಎಜುಕೇಷನ್ ಮೇಲೆ ಮಾತನಾಡಿದ್ದಾರೇ ವಿನಾ ಪ್ರಿಂಟಿಂಗ್ ಪ್ರೆಸ್ ವಿಚಾರವಾಗಿ ಮಾತನಾಡಿಲ್ಲ. ಆ ಬಗ್ಗೆ ಒಂದೆರಡು ನಿಮಿಷಗಳ ಕಾಲ ಅವಕಾಶ ಕೊಟ್ಟರೆ ಸಾಕು. ನಾನು ಒಂದೆರಡು ಸಲಹೆಗಳನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಎಲ್ಲಾ ಡಿಮ್ಯಾಂಡ್ ಮೇಲೆ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಂ. ರುದ್ರಪ್ಪ —ನಾನು ಒಂದೇ ಒಂದು ಸಲಹೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಮಾನ ಅಧ್ಯಕ್ಷರೇ, ಈ ಪ್ರಿಂಟಿಂಗ್ ಪ್ರೆಸ್ ಏನು ಅದು ಬಹಳ ಪ್ರಾಮುಖ್ಯವಾದಂಥಾದ್ದು ಎಂದು ಹೇಳುತ್ತೇನೆ. ನಮ್ಮ ಲೆಜಿಸ್ಲೇಚರ್ ವರ್ಕ್ ಏನು ಇದೆ. ಅದು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಜಾಗ್ರತೆ ಅಚ್ಚು ಆಗುತ್ತಾ ಇಲ್ಲ. ವಿಳಂಬವಾಗುತ್ತಿದೆ. ಆದುದರಿಂದ ಹೈಕೋರ್ಟಿನವರು ಯಾವ ರೀತಿ ತಮಗೆ ಆದ ಒಂದು ಪ್ರಿಂಟಿಂಗ್ ಪ್ರೆಸ್ ಮಾಡಿಕೊಂಡಿದ್ದಾರೆ ಅದೇ ರೀತಿ ನಮ್ಮ ಲೆಜಿಸ್ಲೇಚರ್ ವರ್ಕ್‌ಗೂ ಒಂದು ಪ್ರಿಂಟಿಂಗ್ ಪ್ರೆಸ್ ವಿಭಾಗವನ್ನು ಪ್ರತ್ಯೇಕ ತೆರೆದರೆ ಅನುಕೂಲ.

ಅಧ್ಯಕ್ಷರು.— ಅದರಲ್ಲಿ ನಮ್ಮದೂ ಒಂದು ಭಾಗ ಇದೆ,

ಶ್ರೀ ಕೆ. ಎಂ. ರುದ್ರಪ್ಪ.- ಹಾಗಿದ್ದರೆ ಸಂತೋಷ. ಇನ್ನು ಇದರಲ್ಲಿ ಪ್ರೂಫ್ ರೀಡಿಂಗ್ ಮಾಡತಕ್ಕಂಥಾವರು ದಕ್ಷತೆಯಿಂದ ಮಾಡುತ್ತಾ ಇಲ್ಲ. ಮತ್ತು ಈ ಪಬ್ಲಿಕೇಷನ್ ವಿಳಂಬವಾಗಿ ಬರುತ್ತದೆ.

ಈಗ ಗೆಜೆಟ್‌ನಲ್ಲಿ ಪಬ್ಲಿಕೇಷನ್ ಏನು ಇದೆ ಅದು ಬಹಳ ಮುಖ್ಯ. ಅದರಲ್ಲಿ ಬಹಳ ತಪ್ಪುಗಳು ಇವೆ. ಮುಂದೆ ಆ ರೀತಿ ತಪ್ಪುಗಳು ಆಗದಂತೆ ದಕ್ಷತೆಯಿಂದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ನಮ್ಮ ಭಾಗದ ಪ್ರೆಸ್ ಏನು ಇದೆ ಅದರಲ್ಲಿ ನಮ್ಮ ಪುಸ್ತಕಗಳೇ ಮೊದಲು ಪ್ರಿಂಟ್ ಆಗುತ್ತಿರಲಿಲ್ಲ. ಈಗ ಬಹಳ ಬೇಗ ಪುಸ್ತಕಗಳನ್ನು ಪ್ರಿಂಟ್ ಮಾಡುತ್ತಿದ್ದಾರೆ. ಮತ್ತು ಪಬ್ಲಿಕೇಷನ್ ಕೂಡ ಚೆನ್ನಾಗಿ ಬರುತ್ತಿದೆ.

ಶ್ರೀ ಕೆ. ಎಂ ರುದ್ರಪ್ಪ,—ಆ ರೀತಿ ಇದ್ದರೆ ಸಂತೋಷ. ಇನ್ನೂ ಬೇಗ ದಕ್ಷತೆಯಿಂದ ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಇನ್ನು ಬೋಗಸ್ ಮಾರ್ಕ್ಸ್ ಕಾರ್ಡ್ ಬಗ್ಗೆ ಹೇಳುವುದಾದರೆ ಹಿಂದೆ ಪತ್ರಿಕೆಯಲ್ಲಿ ಈ ಬಗ್ಗೆ ಏನು ಬಂದಿದೆ ಎನ್ನುವುದನ್ನು ಓದಿದ್ದೇವೆ. ಬೋಗಸ್ ಮಾರ್ಕ್ಸ್ ಕಾರ್ಡನ್ನು ಕೆಲವು ವಿದ್ಯಾರ್ಥಿಗಳು ಪಡೆದು ಕೊಂಡು ಯೂನಿವರ್ಸಿಟಿ ಪ್ರವೇಶ ದೊರಕಿಸಿಕೊಂಡಿದ್ದಾರೆ. ಅಂಥಾವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸಿದರೆ ಅನುಕೂಲ.

ಇನ್ನು ಕೊನೆಯದಾಗಿ ಒಂದೇ ಒಂದು ಮಾತು ಹೇಳುತ್ತೇನೆ ಅದೇನೆಂದರೆ ಪರೀಕ್ಷಾ ಕೇಂದ್ರಗಳಲ್ಲಿ ಕೆಲವು ವಿದ್ಯಾರ್ಥಿಗಳು ಸೂಪರ್‌ವೈಸರ್‌ನ್ನು ಹೆದರಿಸಿಕೊಂಡು ಕಾಪಿ ಮಾಡಿಕೊಂಡು ಹೋಗುತ್ತಿದ್ದಾರೆ. ಅಂಥ ಕಡೆ ಪರೀಕ್ಷಾ ಕೇಂದ್ರಗಳಲ್ಲಿ ಒಂದು ಕಟ್ಟು ನಿಟ್ಟಾದ ಕ್ರಮವನ್ನು ಜಾರಿಗೆ ತರಬೇಕು. ಅಲ್ಲದೆ ಆ ಜಾಗಕ್ಕೆ ಪೋಲೀಸ್ ಬಂದೋಬಸ್ತು ಇಟ್ಟು ಆ ಸೂಪರ್‌ವೈಸರ್‌ಗೆ ಯಾವ ತೊಂದರೆಯೂ ಬಾರದಂತೆ ಅವರು ಕಾರ್ಯದಕ್ಷತೆಯಿಂದ ಕೆಲಸ ಮಾಡಿಕೊಂಡು ಹೋಗುವಂತೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಎರಡು ನಿಮಿಷಗಳ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ. (ಸಂತೇಮಾರನಹಳ್ಳಿ),—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ನಮ್ಮ ವಿದ್ಯಾ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಮಾತ್ರ ಸಲಹೆ ಮಾಡುತ್ತೇನೆ. ಮೊದಲನೆಯದಾಗಿ ನಮ್ಮ ಕಾನ್ಸ್ಟಿಟ್ಯೂಷನಲ್ಲಿರುವ ಪ್ರಕಾರ ಹಿಂದುಳಿದ ಜನಾಂಕಕ್ಕೆ ಅಂದರೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಕಕ್ಕೆ ಕೆಲವು ಸವಲತ್ತುಗಳನ್ನು ಮಾಡಿಕೊಟ್ಟಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದರಲ್ಲಿ ಇನ್ನು ಹಿಂದುಳಿದಿರತಕ್ಕಂಥ ಬೇರೆ ಜನರೂ ಇದ್ದಾರೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಬೇರೆ ವರ್ಗಗಳ ಜನರೂ ಇದ್ದಾರೆ ಅವರಿಗೆ ಸರ್ಕಾರ ಇದುವರೆಗೆ ಯಾವುದಾದರೂ ಒಂದು ನಿರೀಕ್ಷಿತವಾದಂಥ ಒಂದು ಸ್ಪೆಸಿಫಿಕ್ ಆದ ಒಂದು ಯೋಜನೆಯನ್ನು ತಯಾರು ಮಾಡಿ ವಿದ್ಯಾಭ್ಯಾಸ ಕೊಟ್ಟಿಲ್ಲ. ಆದುದರಿಂದ ಸರ್ಕಾರದವರು ಅವರ ಬಗ್ಗೆಯೂ ಗಮನಹರಿಸಿ ಅವರಿಗೆ ಒಂದು ವಿದ್ಯಾಭ್ಯಾಸವನ್ನು ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ಆದರೆ ಸರ್ಕಾರ ಹೇಳಬಹುದು ಅದರ ಬಗ್ಗೆ ಏನೂ ರಿಪೋರ್ಟ್ ಇಲ್ಲ ಎಂದು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅಲ್ಲದೆ ಬೇರೆ ಹಿಂದುಳಿದ ವರ್ಗದವರ ಬಗ್ಗೆಯೂ ರಿಪೋರ್ಟ್ ಬಂದಿಲ್ಲ ಎಂದು ಸರ್ಕಾರ ಹೇಳಬಹುದು. ಸರ್ಕಾರ ಆ ರೀತಿ ಒಂದುವೇಳೆ ಹೇಳುವುದೇ ಆಗಿದ್ದರೆ ಅದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಸರ್ಕಾರೀ ಉದ್ಯೋಗಿಗಳಿಗೆ ಯಾವರೀತಿಯಾಗಿ ಇದ್ದರೇ ಹಿಂದುಳಿದ ವರ್ಗದವರು ಎಂದು ವರ್ಗೀಕರಣ ಮಾಡಿದ್ದೀರೋ, ಅದನ್ನು ನಿರೀಕ್ಷಿಸಿ ಮಾಡುವುದಾದರೆ ರಾಜ್ಯಾಂಗದ ರೀತಿ ಅದು ಇಲ್ಲ. ಆದುದರಿಂದ ಈಗ ರಾಜ್ಯಾಂಗ ರೀತಿ ಯಾವ ರೀತಿ ಇದೆಯೋ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಆದುದರಿಂದ ಹಿಂದುಳಿದ ಜನಗಳಲ್ಲಿ ಬೇರೆ ಬೇರೆ ವರ್ಗದ ಜನಗಳು ಇರಬಾರದು ಎಂದು ಹೇಳುವುದಿಲ್ಲ, ಬೇರೆ ಬೇರೆ ವರ್ಗದ ಜನಗಳು ಇರಬೇಕು. ಆದರೆ ಅದರಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದಿರತಕ್ಕಂಥಾವರೆಲ್ಲರಿಗೂ ಈ ಒಂದು ವಿದ್ಯಾಭ್ಯಾಸದ ಅನುಕೂಲತೆಯನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ನಾನು ಒಂದು ಸಲಹೆ ಹೇಳುವುದು ಏನೆಂದರೆ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಆಯಾಯ ಊರಿನಲ್ಲಿ ನೋಡಿದರೆ ಯಾವ ಯಾವ ಜನ ಸಾಮಾಜಿಕವಾಗಿ ಶೈಕ್ಷಿಕವಾಗಿ, ಆರ್ಥಿಕವಾಗಿ ಹಿಂದುಳಿದ್ದಾರೆ ಎನ್ನುವುದನ್ನು ಹೇಳಬಹುದು ? ಆದುದರಿಂದ ಸರ್ಕಾರ ಈ ಹಿಂದುಳಿದವರ ಬಗ್ಗೆ ಏನು ಒಂದು ಕಮಿಷನ್ ಮಾಡಿದ್ದಾರೋ ಅದರ ರಿಪೋರ್ಟ್ ಬರುವ ತನಕ ಕೊನೆಯ ಪಕ್ಷ ಒಂದೊಂದು ತಾಲ್ಲೂಕಿನ ೫೦_೫೦ ಜನಗಳಿಗಾದರೂ ಹಿಂದುಳಿದ ವರ್ಗದವರಿಗೆ ವಿದ್ಯಾಭ್ಯಾಸ ಅನುಕೂಲತೆ ಮಾಡಿಕೊಡುವ

ದಾವರೆ ಈ ವಿದ್ಯಾಭ್ಯಾಸದಲ್ಲಿ ಸರ್ಕಾರ ಏನು ಒಂದು ಗುರಿ ಮುಟ್ಟಬೇಕು ಎಂದು ಇಟ್ಟುಕೊಂಡಿದ್ದಾರೋ ಅದಕ್ಕಿಂತಲೂ ಹೆಚ್ಚಿನ ಸಾಧನೆ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಾಸ್ಟಲ್ ಬಗ್ಗೆ ಹೇಳುವುದಾದರೆ ಎಲ್ಲಾ ಕಡೆಯೂ ಕಮ್ಯೂನಿಟಿ ಹಾಸ್ಟಲ್ ಇರಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಇದರ ಬಗ್ಗೆ ಒಂದು ಗುರಿ ಮುಟ್ಟಬೇಕಾದರೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇದರಲ್ಲಿ ಯಾರೂ ದುರ್ಗಭಿ ಪ್ರಾಯ ಮಾಡಿಕೊಳ್ಳಬೇಡಿ. ಸರ್ಕಾರ ಎಲ್ಲೆಲ್ಲಿ ಜನರಲ್ ಹಾಸ್ಟಲ್‌ನ್ನು ತೆರೆಯುತ್ತಾರೋ ಅಲ್ಲಿ ಎಲ್ಲ ಜಾತೀಯ ಜನರೂ ಇರುತ್ತಾರೆ ಅಲ್ಲಿ ಜಾತಿಯ ಒಂದು ಭೇದ ಹೋಗಬೇಕಾದರೆ ಈ ಹಾಸ್ಟಲ್‌ನಲ್ಲಿ ಅಡಿಗೆಯವನನ್ನು ಮತ್ತು ಊಟಕ್ಕೆ ಬಡಿಸುವವನನ್ನು ಕಡಿಮೆ ದರ್ಜೆಯವರನ್ನು ನೇಮಕ ಮಾಡಬೇಕು. ಯಾರಾದರೂ ಕೂಡ ವಿದ್ಯಾಭ್ಯಾಸ ಮಾಡುವುದಕ್ಕೆ ಬಂದರೆ ಇವರು ಕಡಿಮೆ ದರ್ಜೆಯವರು ಎಂದು ಬೇದಭಾವ ತಿಳಿದುಕೊಳ್ಳುತ್ತಾರೋ ಅವರು ಬರುವುದಿಲ್ಲ, ಯಾರು ಬೇಧಬಾವ ತಿಳಿದುಕೊಳ್ಳದೆ ಮನಸ್ಸು ಪೂರ್ವಕವಾಗಿ ವಿದ್ಯಾಬ್ಯಾಸಮಾಡ ಬೇಕು ಎಂದು ಬರುತ್ತಾರೋ ಅಂಥಾವರಿಗೆ ಮತ್ತಷ್ಟು ಸಹಾಯ ದೊರಕಿದಂತಾಗುತ್ತದೆ ಯಾರನ್ನೂ ಕಂಪೇಲ್ ಮಾಡಬೇಡಿ. ಇದರ ಬಗ್ಗೆ ಸರ್ಕಾರ ಗಮನಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಾಫ್ ಎ ಮಿಲಿಯನ್ ಜಾಬ್ ಬಗ್ಗೆ ಹೇಳುವುದಾದರೆ ಈವೊತ್ತಿನ ನಿರುದ್ಯೋಗದ ಸಮಸ್ಯೆ ಬಗ್ಗೆ ಹೇಳುವುದಾದರೆ ಉಪಾಧ್ಯಾಯರನ್ನು ತಾತ್ಕಾಲಿಕವಾಗಿ ಏನು ಅಪಾಯಿಂಟ್ ಮಾಡಿ ಕೊಳ್ಳುತ್ತಾರೋ ಅವರನ್ನು ಜೂನ್ ನಕ ಕಂಟಿನ್ಯೂ ಮಾಡುತ್ತೇವೆ, ಮಧ್ಯೆ ಅವರನ್ನು ತೆಗೆದುಹಾಕುವುದಿಲ್ಲ ಎಂದು ಹೇಳಿದ್ದಾರೆ. ಆರೀತಿ ಮಾಡಿ ಸಂತೋಷ ಆದರೆ ಈ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡ ಬೇಕಾದರೆ ಎಂಥಾ ಜನಗಳಿಗೆ ಕೊಡಬೇಕು ಅಂದರ ನಿಜವಾಗಿ ಉದ್ಯೋಗವಿಲ್ಲವೋ ಯಾರಿಗೆ ನಿಜವಾಗಿಯೂ ಜೀವನದ ಅವಶ್ಯಕತೆ ಇದೆಯೋ ಯಾರಿಗೆ ಉದ್ಯೋಗವಿಲ್ಲದೆ ಜೀವನ ನಡೆಸುವುದಕ್ಕಾಗುವುಲ್ಲವೊ ಅಂಥ ಹವರಿಗೆ ಈ ಕೆಲಸ ಕೊಡಬೇಕು. ಈವೊತ್ತಿನ ದಿವಸ ಈ ಹಾಫ್ ಎ ಮಿಲಿಯನ್ ಜಾಬ್‌ನಲ್ಲಿ ಅನೇಕ ಸರ್ಕಾರಿ ನೌಕರರ ಮಕ್ಕಳುಗಳು ಇದ್ದಾರೆ ಲ್ಯಾಂಡ್ ಲಾರ್ಡ್ಸ್ ಮಕ್ಕಳುಗಳು ಇದ್ದಾರೆ. ಬೇರೆ ಬೇರೆ ಜನರು ಇದ್ದಾರೆ. ನಈವೊತ್ತು ದಿವಸ ಇಂಜನೀಯರ್ಸ್ ಡಾಕ್ಟರುಗಳು ಬಹುಭಾಗ ಜನರು ಸಾಮಾಜಿಕವಾಗಿ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಬಹಳ ಮುಂದುವರೆದಿದ್ದಾರೆ, ಅವರಿಗೆ ಈ ಕೆಲಸ ಸಿಗದೇಹೋದರೆ ಪರವಾ ಯಿಲ್ಲಾ ಜೀವನ ಮಾಡಿ ಕೊಂಡು ಹೋಗಬಹುದು. ಆದುದರಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡಿ ನಿಜವಾಗಿಯೂಯಾರಿಗೆ ಉದ್ಯೋಗವಿಲ್ಲದೇ ಜೀವನದ ಅವಶ್ಯಕತೆ ಇದೆಯೋ ಅಂಥವರಿಗೆ ಈ ಹಾಫ್ ಎ ಮಿಲಿಯನ್ ಜಾಬ್ ಯೋಜನೆಯಲ್ಲಿ ಕೆಲಸ ಕೊಡಬೇಕು ಎಂದು ಹೇಳಿ ಅಧ್ಯಕ್ಷರು ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—(ವಿದ್ಯಾಶಾಖೆಯ ಮಂತ್ರಿಗಳು), ಮಾನ್ಯ ಅಧ್ಯಕ್ಷರೇ, ಈ ದಿನ ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ವಿವರಣೆಗಳನ್ನು ಕೊಡತಕ್ಕ ಸಂದ ರ್ಭದಲ್ಲಿ ನಾಲ್ಕಾರು ವಿಚಾರಗಳನ್ನು ಇಲ್ಲಿ ನಾನು ಹೇಳಲು ಇಷ್ಟಪಡುತ್ತೇನೆ. ನಿನ್ನೆಯ ದಿವಸ ಮತ್ತು ಈ ದಿವಸ ಇದರ ಬಗ್ಗೆ ಚರ್ಚೆ ನಡೆದು ಇದರಲ್ಲಿ ಸುಮಾರು ೧೩ ಜನ ಸನ್ಮಾನ್ಯ ಸದಸ್ಯರು ಭಾಗವಹಿಸಿ ದ್ದಾರೆ ವಿರೋಧ ಪಕ್ಷದ ಸದಸ್ಯರು ಹಾಗೂ ಮಾತನಾಡಿದ ಇತರ ಸನ್ಮಾನ್ಯ ಸದಸ್ಯರುಗಳು ಅನೇಕ ರಚನಾತ್ಮಕವಾದ ಸಲಹೆಗಳನ್ನು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇ ಗೌಡರು, ಪ್ರೈಮರಿ ಎಜುಕೇಷನ್. ಹಾಗೂ ಪ್ರಿ ಪ್ರೈಮರಿ ಎಜುಕೇಷನ್ ಮತ್ತು ಹೈಸ್ಕೂಲ್ ಎಜು ಕೇಷನ್, ಇಂಡಿಯಾ ಸರಕಾರದ ಕಮಿಷನ್ ಮತ್ತು ಕೊಠಾರಿ ಕಮಿಷನ್ ಇವುಗಳಲ್ಲಿ ಹೇಳಿರುವಂತೆ ವರ್ಕಿಂಗ್ ಎಕ್ಸ್‌ಪೀರಿಯನ್ಸ್ ವಿಷಯದಲ್ಲಿ ಹಾಗೂ ವೇಸ್ಟೇಜ್ ಮತ್ತು ಸ್ಟಾಗ್ನೇಷನ್ ಬಗ್ಗೆ ಹೀಗೆ ಅನೇಕ ವಿಷಯಗಳ ಬಗ್ಗೆ ಇಲ್ಲಿ ಚರ್ಚೆ ಮಾಡಿ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಕೊನೆಯಲ್ಲಿ ಅವರು ಒಂದು ಮಾತನ್ನು ಹೇಳಿದರು. ಈ ವಿದ್ಯಾಭ್ಯಾಸದ ಭಾಷೆಗಾಗಿ ಹಣ ಒದಗಿಸಿರು ವುದು ಬಹು ಕಡಿಮೆ ಆದುದರಿಂದ ಈ ವಿದ್ಯಾ ಕ್ಷೇತ್ರದಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಸಹಾಯವನ್ನು ಒದಗಿಸಬೇಕು ಎನ್ನುವುದನ್ನು ಅರಿತುಕೊಂಡಿದ್ದೇನೆ ಎನ್ನುವ ಮಾತನ್ನೂ ಹೇಳಿದರು. ಮತ್ತು ವಿದ್ಯಾ ಭ್ಯಾಸದ ವಿಷಯವಾಗಿ ಒಳ್ಳೆಯ ಪರಿಣತರು ಮಾತನಾಡುವ ಹಾಗೆ ಬಹಳ ಚೆನ್ನಾಗಿ ಅನುಭವದಿಂದ ಇಲ್ಲಿ ಅವರು ಮಾತನಾಡಿದ್ದಾರೆ ನಾನು ಈ ಇಲಾಖೆಗೆ ಮಂತ್ರಿಯಾಗಿರುವುದರ ಬಗ್ಗೆ ನನ್ನ ವಿಷಯದಲ್ಲಿ ಮಾನ್ಯ ಸದಸ್ಯರೆಲ್ಲರೂ ಒಳ್ಳೆಯ ಮಾತುಗಳನ್ನಾಡಿದ್ದಾರೆ; ಪ್ರಾಥಮಿಕ ಶಿಕ್ಷಣದ ಅವಶ್ಯಕತೆ ಎಷ್ಟಿತ್ತು ಮತ್ತು ಇದು ಎಷ್ಟು ಮಟ್ಟಿಗೆ ಜೀವನಕ್ಕೆ ಹೊಂದಿಕೊಳ್ಳುವ ವಾತಾವರಣವನ್ನು ಅನುಸರಿಸಿಕೊಂಡು ಹೋಗಬೇಕು ಎನ್ನುವುದರ ಬಗ್ಗೆ ಅನೇಕ ಸನ್ಮಾನ್ಯ ಸದಸ್ಯರುಗಳು ಕೂಡ ಇಲ್ಲಿ ಮಾತನಾಡಿದ್ದಾರೆ. ಅವರು ಮುಖ್ಯವಾಗಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಗುಣಮಟ ವನ್ನು ಜಾಸ್ತಿ ಮಾಡುವುದಕ್ಕಾಗಿ ಅನೇಕ

ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರು ಮಾತನಾಡುತ್ತ ಈಗ ವಸೂಲು ಮಾಡುತ್ತಿರುವ ಎಜುಕೇಷನ್ ಸೆಸ್ಸನ್ನು ಇನ್ನೂ ಮೂರು ಕಾಸು ಹೆಚ್ಚು ಮಾಡಿ ನಾವು ಪ್ರಾಥಮಿಕ ಶಿಕ್ಷಣವನ್ನು ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಬರೀ ಪಟ್ಟಣಗಳಲ್ಲಿ ಮಾಡುವುದಕ್ಕಿಂತ ಇದನ್ನು ಗ್ರಾಮಾಂತರಗಳಲ್ಲೂ ವಿಸ್ತರಣೆ ಮಾಡಬೇಕೆಂದು ಹೇಳಿದರು. ಪೂರ್ವ ಪ್ರಾಥಮಿಕ ಶಾಲೆಗಳನ್ನು ಹಳ್ಳಿಗಳಲ್ಲಿರುವ ತಾಲ್ಲೂಕಾ ಅಭಿವೃದ್ಧಿ ಮಂಡಳಿಗಳು ನಡೆಸಿಕೊಂಡು ಬರುತ್ತಿವೆ. ಈ ಐದನೆಯ ಯೋಜನೆಯ ಕಾಲದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಬೇಕೆಂದು ಸುಮಾರು ೩೦೦ ಪ್ರಾಥಮಿಕ ಶಾಲೆಗಳನ್ನು ಈಗಾಗಲೇ ತೆರಿದಿದ್ದೇವೆ. ಇನ್ನೂ ಹೆಚ್ಚು ಶಾಲೆಗಳನ್ನು ತೆರೆಯಬೇಕೆಂದು ಮಾನ್ಯ ಸದಸ್ಯರು ಇಲ್ಲಿ ಮಾತನಾಡಿದ್ದಾರೆ ಮತ್ತು ರಚನಾತ್ಮಕವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಮಾತನಾಡುತ್ತ ಶಿಕ್ಷಣದ ಸುಧಾರಣೆಯಾಗಬೇಕು ಎಂದು ಹೇಳಿದರು. ಇದರಂತೆ ಇನ್ನೂ ಅನೇಕ ಮಾನ್ಯ ಸದಸ್ಯರು ಅನೇಕರು ಇದೇ ಸಲಹೆಗಳನ್ನು ಕೊಟ್ಟಿದ್ದಾರೆ. ಶಿಕ್ಷಣವನ್ನು ಸುಧಾರಣೆ ಮಾಡುವುದರ ಆವಶ್ಯಕತೆ ಬಗ್ಗೆ ಇತ್ತೀಚಿಗೆ ಸರಕಾರದವರು ಯಾವ ನೀತಿಯನ್ನು ಅನುಸರಿಸಬೇಕೆಂದು ಹಾಕಿದ್ದಾರೋ ಅದನ್ನು ಪುನಃ ಪರಿಶೀಲನೆ ಮಾಡಬೇಕು. ಇದರ ರೂಪು ರೇಖೆಗಳನ್ನು ಸರಿಯಾದ ರೀತಿಯಲ್ಲಿ ಬದಲಾಯಿಸಬೇಕೆಂದೂ ಅವರು ಹೇಳಿದ್ದಾರೆ. ಹಾಗೂ ಪಬ್ಲಿಕ್ ಲೈಬ್ರರಿಯ ವಿಷಯವಾಗಿ ಹೇಳುತ್ತ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಪಬ್ಲಿಕ್ ಲೈಬ್ರರಿಗಳನ್ನು ತೆರೆಯಬೇಕೆಂದು ಹೇಳಿದ್ದಾರೆ. ಸರಕಾರ ಈಗಾಗಲೇ ೧೫ ಜಿಲ್ಲೆಗಳಲ್ಲಿ ಇಂತಹ ಪಬ್ಲಿಕ್ ಲೈಬ್ರರಿಯ ಕೇಂದ್ರಗಳನ್ನು ತೆರೆದಿದ್ದಾರೆ. ಎಲ್ಲ ಜಿಲ್ಲಾ ಮಟ್ಟದಲ್ಲೂ ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆಯಬೇಕೆಂದು ಸರಕಾರ ಯೋಜನೆ ಹಾಕಿಕೊಂಡಿದೆ ಮತ್ತು ಈಗಾಗಲೇ ತೆರೆದಿರುವ ಕೇಂದ್ರಗಳಲ್ಲಿ ಹಂಗಾಮಿಯಾಗಿ ನೌಕರರುಗಳು ಕೆಲಸ ಮಾಡುತ್ತಿದ್ದಾರೆ. ಇವರನ್ನು ರೆಗ್ಯುಲರೈಸು ಮಾಡಲು ಇದರ ಬಗ್ಗೆ ಕೇಡರು ಮತ್ತು ರೆಕ್ರೂಟುಮೆಂಟು ರೂಲ್ಸುಗಳನ್ನು ಮಾಡಿದ್ದೇವೆ. ಇದರಂತೆ ನಿಯಮಾವಳಿಗಳು ಹಾಗೂ ಇದರ ರೂಪು ರೇಖೆಗಳನ್ನು ರಚಿಸಲಾಗಿದೆ ಮತ್ತು ಮುಂದೆ ಇವರುಗಳು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಕೂಡ ಹೋಗಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ವಿದ್ಯಾಭ್ಯಾಸದ ಸುಧಾರಣಾ ಮಟ್ಟವನ್ನು ಹೆಚ್ಚಿಸುವುದರ ಬಗ್ಗೆ ಅನೇಕ ಸಲಹೆಗಳನ್ನು ಅವರು ಇಲ್ಲಿ ಕೊಟ್ಟಿದ್ದಾರೆ. ಇವಕ್ಕೆಲ್ಲಾ ನಾನು ಈಗ ಉತ್ತರ ಕೊಡಬೇಕಾದರೆ ನನಗೆ ಸುಮಾರು ಎರಡು ಗಂಟೆಗಳಷ್ಟು ಕಾಲಾವಕಾಶ ಬೇಕಾಗುತ್ತವೆ. ಆದರೆ ಅಧ್ಯಕ್ಷರು ಅಪ್ಪಣೆ ಕೊಟ್ಟಿರುವಂತೆ ನಾನು ಸುಮಾರು ಅರ್ಧಗಂಟೆಯೊಳಗೇ ಮುಗಿಸಬೇಕಾಗಿದೆ. ಆದ್ದರಿಂದ ಕೆಲವು ಮುಖ್ಯ ವಿಷಯಗಳ ಬಗ್ಗೆ ಸದಸ್ಯರು ಮಾಡಿರತಕ್ಕ ಕೆಲವು ಅಂಶಗಳ ಬಗ್ಗೆ ಇಲ್ಲಿ ಹೇಳುತ್ತೇನೆ ಮತ್ತು ಇತರ ಸಲಹೆಗಳನ್ನೂ ಕೂಡ ನಾನು ಪರಿಶೀಲನೆ ಮಾಡುತ್ತೇನೆ.

ಗುಲ್ಬರ್ಗಾದಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ ಎನ್ನುವ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಶ್ರೀ ಧರ್ಮಸಿಂಗರೂ ಇದರ ಬಗ್ಗೆ ಹೇಳಿದರು. ನಾನು ಹೇಳುವುದು ಇದಕ್ಕಾಗಿ ಈಗಾಗಲೇ ಕೇಂದ್ರದಿಂದ ಸುಮಾರು ೨೭ ಲಕ್ಷ ರೂಪಾಯಿಗಳು ಬಂದಿವೆ ಮತ್ತು ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಇದಕ್ಕೆ ಬರಬೇಕಾದ ಅನುದಾನಗಳು ಬರುತ್ತಿವೆ ಮತ್ತು ಅದರಂತೆ ಅಭಿವೃದ್ಧಿ ಸಾಧನೆ ಮಾಡುವುದರ ಕಡೆಗೆ ಕೆಲಸಗಳಾಗುತ್ತಿವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಮಾಡಿರುವ ಇತರ ಸಲಹೆಗಳನ್ನೂ ನಾನು ಪರಿಶೀಲನೆ ಮಾಡುತ್ತೇನೆ. ಅಧ್ಯಾಪಕರನ್ನು ಆಯ್ಕೆ ಮಾಡತಕ್ಕ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಆಯ್ಕೆಗಳನ್ನು ಮಾಡಬೇಕೆಂದು ಹೇಳಿದರು. ನಾನು ಇದರ ಬಗ್ಗೆ ಹೇಳುವುದು ಇಷ್ಟೇ, ಹೈಸ್ಕೂಲಿಗೆ ಅಧ್ಯಾಪಕರುಗಳನ್ನು ಆರಿಸುವಾಗ ಬಿ ಎಡ್ ಪಾಸು ಮಾಡಿರುವವರನ್ನೇ ನೇಮಕ ಮಾಡುತ್ತಾರೆ. ಪ್ರೈಮರಿ ಶಾಲೆಗಳಲ್ಲಿ ಹಾಗೂ ಹೈಯರ್ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕವರು ಟಿ ಸಿ ಹೆಚ್ ಟ್ರೇನಿಂಗು ಪಡೆದಿರುವವರನ್ನು ಆರಿಸಲಾಗುತ್ತಿದೆ. ಆದರೆ ಇದರಲ್ಲಿ ಎಸ್‌ಸಿಎಸ್‌ಟಿ ವರ್ಗದವರಿಗೆ ಮಿನಿಮಂ ಕ್ವಾಲಿಫಿಕೇಷನ್ ಎಂದಿದೆ. ಇದಲ್ಲದೆ ರಿಫ್ರೆಷರು ಕೋರ್ಸ್ ಇತ್ಯಾದಿ ತರಬೇತಿಗಳನ್ನು ಕೊಡಲಾಗುತ್ತಿದೆ. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕೆಂದು ಸನ್ಮಾನ್ಯ ಸದಸ್ಯರುಗಳು ಹೇಳಿದ್ದಾರೆ

1-30 P. M.

ಇವೊತ್ತಿನ ದಿವಸ ಲಕ್ಷಾಂತರ ಜನರು ನಿರಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನು ಕೊಡುವುದರಲ್ಲಿ ವಿಫಲರಾಗಿದ್ದೀರಿ ಎಂದು ಹೇಳಿದರು. ಅದಕ್ಕೆ ನಾನು ಉತ್ತರ ಹೇಳುತ್ತೇನೆ ಇದು ದೊಡ್ಡ ಪ್ರಶ್ನೆ. ಕರ್ನಾಟಕದಲ್ಲಿ ಪ್ರತಿವರ್ಷ ೮ ಲಕ್ಷ ಮಕ್ಕಳು ಹುಟ್ಟುತ್ತವೆ. ಆದ್ದರಿಂದ ಈ ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗಬೇಕಾದರೆ ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ಅದರಲ್ಲೂ ಬಡವರು ಮತ್ತು ಹಿಂದುಳಿದ ವರ್ಗದವರ ಮಕ್ಕಳು ಶಾಲೆಗೆ ಬರುವುದಕ್ಕೆ ತೊಂದರೆಯಾಗು

ತ್ತದೆ ಎಂದು ಒಂದು ಸಾವಿರ ನರ್ಸರಿ ಶಾಲೆಗಳನ್ನು ತೆರೆಯಬೇಕೆಂದು ಯೋಜನೆಯಲ್ಲಿ ಒಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಒಂದು ಇನ್‌ಸೆನ್‌ಟೀವ್ ಸ್ಕೀಮನ್ನು ಹಾಕಿಕೊಂಡಿದ್ದೇವೆ. ಕಳೆದ ವರ್ಷ ಹಣಕಾಸಿನ ತೊಂದರೆ ಇದ್ದುದರಿಂದ ೪೦ ಲಕ್ಷ ರೂಪಾಯಿಗಳನ್ನು ಇದಕ್ಕೆ ಪ್ರಾವಿಜನ್ ಮಾಡಿದ್ದರೂ ಕೂಡ ಈ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಶ್ರೀಮಾನ್ ದೇವೇಗೌಡರು ಮುಖ್ಯವಾಗಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಬಡವರು ಮತ್ತು ಹಿಂದುಳಿದವರು ತಮ್ಮ ಮಕ್ಕಳನ್ನು ಜೀತಕ್ಕೆ ಇಡುತ್ತಿದ್ದಾರೆ. ಆದ್ದರಿಂದ ಅಂಥಮಕ್ಕಳ ತಂದೆತಾಯಿಗಳಿಗೆ ಮೇಂಟೇನನ್ಸ್ ಸ್ಕಾಲರ್‌ಷಿಪ್ ಕೊಡಬೇಕೆಂದು ಅದಕ್ಕೆ ಒಂದು ಯೋಜನೆಯನ್ನು ತರಬೇಕೆಂದು ಹೇಳಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತೇನೆ, ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಹೈಸ್ಕೂಲ್ ಶಿಕ್ಷಣದ ಬಗ್ಗೆ ಹೇಳುವುದಾದರೆ ಹೈಸ್ಕೂಲುಗಳನ್ನು ಜಾಸ್ತಿ ಮಾಡಿಕೊಂಡು ಹೋಗಕೂಡದು ಎಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಹೈಸ್ಕೂಲುಗಳನ್ನು ಸ್ಥಾಪನೆ ಮಾಡುವ ಬಗ್ಗೆ ಖಾಸಗಿ ಸಂಸ್ಥೆಗಳವರಿಂದ ಬೇಡಿಕೆಗಳು ಬರುತ್ತವೆ. ಆದ್ದರಿಂದ ಹೈಸ್ಕೂಲು ಮತ್ತು ಕಾಲೇಜುಗಳನ್ನು ಹೆಚ್ಚಿಗೆ ಕೊಡಕೂಡದು ಮತ್ತು ಹೊಸದಾಗಿ ಪ್ರಾರಂಭವಾಗುವ ಹೈಸ್ಕೂಲುಗಳಿಗೆ ೫ ವರ್ಷಗಳಕಾಲ ಗ್ರ್ಯಾಂಟ್ ಕೊಡಕೂಡದು ಎಂದು ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಖಾಸಗಿ ಸಂಸ್ಥೆಗಳಿಗೆ ಬಗ್ಗೆ ಶ್ರೀಮಾನ್ ಶಾಮಣ್ಣನವರು ೧೯ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಇದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದ್ದಾರೆ. ಎಷ್ಟೋ ಖಾಸಗಿ ಶಾಲೆಗಳಲ್ಲಿ ನಡೆಯುತಕ್ಕ ಅನ್ಯಾಯ ಹಾಗೂ ಇತರ ವಿಷಯಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಶ್ರೀಮಾನ್ ಸನದಿಯವರು ಹಾಗೂ ಶ್ರೀಮಾನ್ ದೇವೇಗೌಡರು ಹಾಗೂ ಇತರ ಮಾನ್ಯ ಸದಸ್ಯರು ಮಾತನಾಡುವಾಗ ಕಾಂಪ್ರಹೆನ್ಸೀವ್ ಎಜುಕೇಷನ್ ಬಿಲ್ಲನ್ನು ಸಾಧ್ಯವಾದಷ್ಟು ಬೇಗ ತರಬೇಕೆಂದು ಹೇಳಿದ್ದಾರೆ. ಈಗಾಗಲೇ ಸುಪ್ರೀಮ್ ಕೋರ್ಟ್ ಗುಜರಾತ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಹಾಗೆ ಒಂದು ತೀರ್ಮಾನವನ್ನು ಕೊಟ್ಟಿದೆ. ಆದ್ದರಿಂದ ಅದರ ಹಿನ್ನೆಲೆಯಲ್ಲಿ ಈ ಮಸೂದೆಯಲ್ಲಿ ಕೆಲವು ಬದಲಾವಣೆ ಮಾಡಬೇಕಾಗಿರುವ ದೃಷ್ಟಿಯಿಂದ ಇದು ಸ್ವಲ್ಪ ತಡವಾಗಿದೆ. ಈಗಾಗಲೇ ಅದನ್ನು ಬಿಲ್ ಫಾರಂ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಈಗಾಗಲೇ ಫೈನಲ್ ಮಾಡತಕ್ಕ ಕೆಲಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ಕಾಂಪ್ರಹೆನ್ಸೀವ್ ಬಿಲ್ ಬಂದಮೇಲೆ ಕಾಂಪ್ರಹೆನ್ಸೀವ್ ಗ್ರಾಂಟ್ ಇನ್ ಎಯ್ಡ್ ಕೋಡ್ ತರಬೇಕಾಗಿದೆ. ಈ ಶಾಲೆಗಳಲ್ಲಿ ನಡೆಯುತಕ್ಕ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಎಷ್ಟೇ ಪ್ರಾವಿಜನ್ ಇದ್ದರೂ ಕೂಡ ಅವುಗಳನ್ನು ಎನ್‌ಫೋರ್ಸ್ ಮಾಡಬೇಕಾದರೆ ಲೀಗಲ್ ಸ್ಯಾಂಕ್ಷನ್ ಇಲ್ಲದೆ ಇರುವುದರಿಂದ ಆಗಿರತಕ್ಕ ತೊಂದರೆಗಳನ್ನು ನಾವು ಇವೊತ್ತಿನ ದಿವಸ ನೋಡುತ್ತಿದ್ದೇವೆ. ಕಾಂಪ್ರಹೆನ್ಸೀವ್ ಬಿಲ್ ಬಂದ ಮೇಲೆ ಇದಲ್ಲವೂ ಸರಿಹೋಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾವಾಗ ಬರುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಅಧಿವೇಶನದಲ್ಲಿ ಆಗುವುದಿಲ್ಲ. ಮುಂದಿನ ಅಧಿವೇಶನದಲ್ಲಿ ಇದನ್ನು ತರುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ. ಅದು ಬಂದ ಮೇಲೆ ವಿದ್ಯಾ ಕ್ಷೇತ್ರದಲ್ಲಿ ಯಾವುದೇ ಸಮಸ್ಯೆ ಇದ್ದರೂ ಕೂಡ ಅವೆಲ್ಲವೂ ಪರಿಹಾರವಾಗುತ್ತವೆ ಎನ್ನುವ ನಂಬಿಕೆ ನನಗೆ ಇದೆ.

ಅಡಲ್ಟ್ ಎಜುಕೇಷನ್ ವಿಷಯದಲ್ಲಿ ಒಬ್ಬರು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನು ಎಲ್ಲರಿಗೂ ಕೊಟ್ಟರೆ ಸಾಕ್ಷರತೆ ಜಾಸ್ತಿಯಾಗುತ್ತದೆ. ಸಮಗ್ರ ಕ್ರಾಂತಿಯಾಗುತ್ತದೆ. ಆ ಕ್ರಾಂತಿಯಿಂದ ದೇಶದಲ್ಲಿರತಕ್ಕ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಜಾತೀಯತೆಯಾಗಲೀ, ಪಕ್ಷಪಾತವಾಗಲೀ ಇತರ ನಮ್ಮ ದೇಶದ ಸಮಸ್ಯೆಗಳಾಗಲೀ ಅವುಗಳನ್ನು ಅರ್ಥ ಮಾಡಿಕೊಳ್ಳತಕ್ಕ ಶಕ್ತಿ ನಮ್ಮ ದೇಶದಲ್ಲಿ ಎಷ್ಟೋ ಜನಗಳಿಗೆ ಬಂದಿಲ್ಲ. ಇಂಥಾ ಸನ್ನಿವೇಶದಲ್ಲಿ ಈಗ ಇರತಕ್ಕ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗ ಇರತಕ್ಕ ಶಿಕ್ಷಣ ಪದ್ಧತಿಯನ್ನು ಉಳಿಸಿಕೊಂಡು ಎಲ್ಲೆಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುವುದಕ್ಕೆ ಸಾಧ್ಯವೇ ಹೊರತು ಮೂಲಭೂತವಾಗಿ ಬದಲಾವಣೆ ಮಾಡುತ್ತೇವೆ ಎಂದು ಹೇಳಿದರೆ ಅಷ್ಟು ಸುಲಭವಾಗಿ ಒಂದೇ ದಿವಸದಲ್ಲಿ ಎಲ್ಲಾ ಬದಲಾವಣೆಯನ್ನೂ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ನಾವು ಡೆಮಾಕ್ರಸಿ ಸೊಸೈಟಿಯಲ್ಲಿದ್ದೇವೆ. ಈ ಚೌಕಟ್ಟಿನಲ್ಲಿ ಎಲ್ಲರೂ ಒಮ್ಮತದಿಂದ ಕೆಲಸ ಮಾಡಬೇಕು. ಸರ್ಕಾರ ಏನು ಕೆಲಸ ಮಾಡಬೇಕಾದರೂ ಕೂಡ Government is the machinery through which the will of the State is carried out. The will of the State is expressed by political parties, especially the majority party and the views of the minorities will be taken into considerations and decisions will be taken. ಈಗ ನಾವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದೇವೆ. ಸಾಕ್ಷರತೆಗೆ ಹೆಚ್ಚು ಗಮನ ಕೊಟ್ಟಿದ್ದೇವೆ.

SRI M. S. KRISHNAN.—The Hon. Minister knows what a State is. The State is an instrument of oppression.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದನ್ನು ಕೂಡ ಕಾನೂನು ಚೌಕಟ್ಟಿನಲ್ಲಿ ಎಷ್ಟರಮಟ್ಟಿಗೆ ತಡೆಗಟ್ಟುವುದಕ್ಕೆ ಸಾಧ್ಯವೋ ಅಷ್ಟರ ಮಟ್ಟಿಗೆ ತಡೆಗಟ್ಟುತ್ತಿದ್ದೇವೆ. ಸಾವರ್ನಿಟಿ ಎಂದರೆ ನಮ್ಮ ಸ್ಟೇಟಿನಲ್ಲಿ ಅನೇಕ ಸಂಘಗಳು ವಿಶ್ವವಿದ್ಯಾನಿಲಯುಗಳು ಸ್ವಾಯತ್ತತೆಯನ್ನು ಪಡೆದುಕೊಂಡಿವೆ. ಈ ಡೆಮೊಕ್ರಟಿಕ್ ಸೆಟಪ್‌ನಲ್ಲಿ ಅಷ್ಟು ಸುಲಭವಾಗಿ ಅವುಗಳ ಹಕ್ಕನ್ನು ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲ. ಏನೇ ಒಂದು ಕಾನೂನು ಮಾಡಿದರೂ ಕೂಡ ಎಷ್ಟೋ ಸಂದರ್ಭಗಳಲ್ಲಿ ನಾವು ಎಷ್ಟೇ ತೀರ್ಮಾನಗಳನ್ನು ತೆಗೆದು ಕೊಂಡರೂ ಕೂಡ ಅವುಗಳ ಬಗ್ಗೆ ಉಚ್ಚ ನ್ಯಾಯಾಲಯುಗಳಿಂದ ತೀರ್ಪು ಬಂದಾಗ ಅದಕ್ಕೆ ತಲಬಾಗಿ ಒಪ್ಪಿಕೊಂಡು ಅದಕ್ಕೆ ತಕ್ಕಂತೆ ಕೆಲಸ ಮಾಡಿಕೊಂಡು ಹೋಗತಕ್ಕಂಥ ಸಂದರ್ಭ ಬಂದರೆ ಡಿಲೇ ಆಗ ಬಹುದು. ಇದು ತಮಗೆ ತಿಳಿದಿಂತಕ್ಕ ವಿಷಯ. ಈ ಬಗ್ಗೆ ನಾನು ತಮಗೆ ಹೆಚ್ಚು ಹೇಳಬೇಕಾಗಿಲ್ಲ.

ಶ್ರೀಮಾನ್ ಧರ್ಮಸಿಂಗ್ ಅವರು ಅಧ್ಯಾಪಕರ ಏಜ್ ಆಫ್ ರಿಟೈರ್‌ಮೆಂಟ್ ವಿಷಯ ಮಾತನಾಡಿ ದ್ದಾರೆ. ಈ ಬಗ್ಗೆ ಕೋರ್ಟಿನಿಂದಲೂ ಸಹ ಡಿಸಿಷನ್ ಬಂದಿದೆ ಎಲ್ಲಾ ಕಡೆಯಲ್ಲಿಯೂ ಒಂದೇ ಏಜ್ ಆಫ್ ರಿಟೈರ್‌ಮೆಂಟ್ ಇರಬೇಕೆಂದು ಸರ್ಕಾರದ ನಿರ್ದಿಷ್ಟವಾದ ಅಭಿಪ್ರಾಯ. ಖಚಿತವಾದ ಅಭಿಪ್ರಾಯ. ಇವಕ್ಕೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ನಾನು ಕಷ್ಟಪಡುತ್ತೇನೆ.

ಇನ್ನು ಎಲ್ಲಾ ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯುಗಳಿಗೆ ಉತ್ತರ ಕೊಡಬೇಕಾದರೆ ಬಹಳ ಕಾಲ ಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಸದಸ್ಯರು ಎಲ್ಲಾ ವಿಷಯುಗಳಿಗೂ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ ಬಹಳ ಮುಖ್ಯವಾದ ವಿಷಯುಗಳಿಗೆ ಮಾತ್ರ ನಾನು ಉತ್ತರ ಕೊಡುವುದನ್ನು ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ದೇವೇಗೌಡರು ಪ್ರೆಸ್ ಸ್ಥಾಪನೆ ಮಾಡುವುದರಲ್ಲಿ ಬಹಳ ತಡವಾಗಿದೆ ಎಂದು ಹೇಳಿದರು. ಆದರೆ ಇದಕ್ಕೆ ಸಂಬಂಧಪಟ್ಟ ಮೆಷನರಿ ಎಲ್ಲಾ ಬರಬೇಕು, ಈಗ ಪಠ್ಯ ಪುಸ್ತಕಗಳ ಕೆಲಸ ಎಲ್ಲವನ್ನೂ ಸಹ ನಮ್ಮ ಸರ್ಕಾರದ ಪ್ರೆಸ್ಸಿನಲ್ಲೇ ಮಾಡುತ್ತಿದ್ದೇವೆ. ಈ ಹೊಸ ಪ್ರೆಸ್ ಬಂದ ಮೇಲೆ ಇನ್ನೂ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಕೇಂದ್ರ ಸರ್ಕಾರದವರ ನೆರವಿನಿಂದ ಸುಮಾರು 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇನ್ನೊಂದು ಪ್ರೆಸ್ ಮಾಡುತ್ತೇವೆ. ಅದೂ ಕೂಡ ಬಂದ ಮೇಲೆ ಈ ವಿಷಯುದಲ್ಲಿ ಯಾವ ಕೊರತೆಯೂ ಇರುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾಮನ್ ಯೂನಿವರ್ಸಿಟಿ ಮಸೂದೆಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕಾರಣಾಂತರಗಳಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇದನ್ನೂ ಕೂಡ ನಾವು ಆದಷ್ಟು ಜಾಗ್ರತೆ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಉರ್ದು ಶಾಲೆಗಳ ವಿಷಯದಲ್ಲಿ ಸಾಕಷ್ಟು ಗಮನ ಕೊಟ್ಟಿಲ್ಲ ಎಂದು ಹೇಳಿದರು. ಅದು ಸರಿಯಲ್ಲ. ಉರ್ದು ಶಾಲೆಗಳಲ್ಲಿ ಕನ್ನಡವನ್ನು ಮಕ್ಕಳಿಗೆ ಕಲಿಸುವುದಕ್ಕೆ ಅವಕಾಶ ಇದೆ, ಮೂರನೇ ಸ್ಟ್ಯಾಂಡರ್ಡ್‌ನಿಂದ ಕನ್ನಡವನ್ನು ಕಂಪಲ್ಸರಿ ಸಬ್ಜೆಕ್ಟಾಗಿ ಹಾಕಿರುವುದರಿಂದ ಉರ್ದು ಶಾಲೆಗಳಲ್ಲಿ ಕನ್ನಡವನ್ನು ಬಹಳ ಸಂತೋಷದಿಂದ ಮಕ್ಕಳು ಕಲಿಯುತ್ತಿದ್ದಾರೆ. ಅದಕ್ಕೆ ಬೇಕಾದ ಉಪಾಧ್ಯಾಯರು ಮತ್ತು ಇತರ ಸೌಲಭ್ಯಗಳನ್ನು ಕೊಡಲಾಗುತ್ತಿದೆ.

ಇನ್ನು ಮುಸ್ಲಿಮ್ಸ್ ಸ್ಕಾಲರ್‌ಷಿಪ್ಸ್ ವಿಷಯ. ನಾವು ಯಾವಾಗ ಸೆಕ್ಯುಲರ್ ಸ್ಟೇಟ್‌ನಲ್ಲಿದ್ದೇವೋ ಆಗ ನಾವು ಸೆಕ್ಯುಲರಾಗಿಯೇ ಇರಬೇಕಾಗುತ್ತದೆ, ಮಾನ್ಯ ಸದಸ್ಯರು ಇನ್ನೂ ಕೆಲವು ಉರ್ದುಗೆ ಸಂಬಂಧಪಟ್ಟ ವಿಷಯುಗಳನ್ನೂ ಮತ್ತು ಉರ್ದು ಭಾಷೆ ಡೆವಲಪ್ ಮಾಡುವ ಬಗ್ಗೆ ಅನೇಕ ವಿಚಾರ ಗಳನ್ನು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿದ್ದು ಸೆಕ್ಯುಲರ್ ಆಗಿಲ್ಲವೆಂದು ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಸೆಕ್ಯುಲರ್ ಸ್ಟೇಟ್‌ನಲ್ಲಿಯೇ ಇದ್ದಾರೆ. ಕುರಾನ್ ಗ್ರಂಥಗಳಿಂದಲೂ ಕೂಡ ಕೆಲವು ಪುಸ್ತಕಗಳನ್ನು ಈಗಾಗಲೇ ಕೊಂಡುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆ. ಅದರ ಬಗ್ಗೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವು ಮಾನ್ಯ ಸದಸ್ಯರು ಏನೇನು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೋ ಆ ಕಡೆಗೆ ಸೂಕ್ತ ಗಮನವನ್ನು ಹರಿಸುತ್ತೇನೆ.

ಇನ್ನು ಪಾಲಿಟೆಕ್ನಿಕ್ ಮತ್ತು ಇತರ ಇಂಜನಿಯರಿಂಗ್ ಕಾಲೇಜುಗಳು ಏನಿವೆಯೋ ಅಲ್ಲಿ ಕೇವಲ ತಾಂತ್ರಿಕ ವಿದ್ಯಾಭ್ಯಾಸ ಕೊಡುತ್ತಿದ್ದರೂ ಇನ್ನೂ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಲೇ ಇದೆಯೆಂದು ಕೆಲವು ಸದಸ್ಯರು ಹೇಳಿದರು. ಈಗಾಗಲೇ ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ನಾವು ನಮ್ಮ ಸಮಾಜಕ್ಕೆ ಎಷ್ಟು ಅವಶ್ಯಕತೆ ಇದೆಯೋ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಸಂಸ್ಥೆಗಳಿಗೆ ಎಷ್ಟೆಷ್ಟು ಅವಶ್ಯಕತೆ ಇದೆಯೋ ಅಷ್ಟಕ್ಕೆ ಬೇಕಾಗತಕ್ಕವರನ್ನು ಮಾತ್ರ ನಾವು ತಯಾರುಮಾಡುವುದು ಒಳ್ಳೆಯದು. ನಾವು ಎಷ್ಟು ಸೀಟುಗಳನ್ನು ಕೊಡುವುದಕ್ಕೆ ಗೊತ್ತುಮಾಡಿದ್ದೇವೋ ಅದಕ್ಕಿಂತಲೂ ಜಾಸ್ತಿಯಾಗಿ ಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತಾ ಇಲ್ಲ. ಸೇಕಡ ೮೦ರಷ್ಟು ಸೀಟುಗಳನ್ನು ಅಲ್ಲಿ ಡೊನೇಷನ್ ಇಲ್ಲದೆ ಕೊಟ್ಟಿದ್ದೇವೆ; ಸರ್ಕಾರದ ಏಡನ್ನು ಕೊಡತಕ್ಕ ಕಾಲೇಜುಗಳಲ್ಲಿ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರೊಬ್ಬರು ಗೌರ್ನಿಂಗ್ ಕೌನ್ಸಿಲ್‌ನಲ್ಲಿ ಸದಸ್ಯರಾಗಿದ್ದಾರೆ. ಇನ್ನುಳಿದ ಸೇಕಡ ೨೦ರಷ್ಟು ಸೀಟುಗಳನ್ನು ಡೊನೇಷನ್ ಮೇಲೆ ತೆಗೆದುಕೊಳ್ಳುವುದಕ್ಕೆ ಅಲ್ಲಿ ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ —ಅದೇ ತಪ್ಪು.

ಶ್ರೀ ಎಂ, ಮಲ್ಲಿಕಾರ್ಜುನಸ್ವಾಮಿ.—ಸರ್ಕಾರದವರೇ ಎಲ್ಲವನ್ನೂ ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ನಾವು ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಖಾಸಗೀ ಸಂಸ್ಥೆಗಳು ಈಗ ಮುಂದೆ ಬರುತ್ತಿರುವಾಗ, ಅವರಿಗೆ ಅಷ್ಟನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಚೆನ್ನಾಗಿರುವುದಿಲ್ಲ

SRI M. S. KRISHNAN.—Education is the states' responsibility and the socialism you proclaim. It is a basic thing, if you commercialise.

SRI M. MALLIKARJUNA SWAMY.—Democracy is a method and Socialism is the goal.

ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಅದೊಂದು ಮೆಥೆಡ್. ಆದ್ದರಿಂದಲೇ ನಾವು ಈಗ ಒಂದು ಸಮಾಜವಾದೀ ಸ್ವರೂಪದ ಕನಸನ್ನು ಕಾಣುತ್ತಿದ್ದೇವೆ. ಅದು ಆಗಬೇಕಾದರೆ ಅಷ್ಟು ಸುಲಭವಾಗಿ ಆಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ,—ಕರ್ನಾಟಕದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಪ್ರಗತಿಗೆ ಬರುವ ದೃಷ್ಟಿಯಿಂದ ಆಲಾಯದ ವಿದ್ಯಾರ್ಥಿ ನಿಲಯಗಳನ್ನು ಎಲ್ಲಾ ಕ್ಷೇತ್ರದಲ್ಲಿ ಸ್ಥಾಪನೆ ಮಾಡಬೇಕು. ಗ್ರಾಮಾಂತರ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಈ ಸಾಲಿನಲ್ಲಿ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಈಗ ಹೆಣ್ಣುಮಕ್ಕಳಿಗೆ ಅಟೆಂಡೆನ್ಸ್ ಸ್ಕಾಲರ್‌ಷಿಪ್ ವಗೈರೆ ಕೊಡುತ್ತಿದ್ದೇವೆ. ಎಲ್ಲರಿಗೂ ಹಾಸ್ಟೆಲ್ ಸೌಕರ್ಯಗಳನ್ನು ಒದಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ, ಆ ರೀತಿಯಾಗಿ ಸರ್ಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಹೆಣ್ಣುಮಕ್ಕಳ ವಿದ್ಯೆಗೆ ಹೆಚ್ಚು ಪ್ರೋತ್ಸಾಹವನ್ನು ಮುಂಗಡೆಯ ಯೋಜನೆಯಿಂದ ಕೊಡುತ್ತಲೇ ಇದ್ದೇವೆ. ಅದಕ್ಕೆ ಮೊದಲು ಹೆಚ್ಚಿಗೆ ಅವರ ವಿದ್ಯಾಭ್ಯಾಸಕ್ಕೆ ಗಮನಕೊಟ್ಟಿರಲಿಲ್ಲ. ಈಗ ಮಾನ್ಯ ಸದಸ್ಯರು ಆ ವಿಚಾರವನ್ನು ಎಲ್ಲರ ಕಣ್ಣಿಗೆ ಸೆಳೆಯುತ್ತಿದ್ದಾರೆ. ಮಾನ್ಯ ಶ್ರೀ ಸಿದ್ದಯ್ಯನವರು ಜೂನಿಯರ್ ಕಾಲೇಜು ಇರುವ ಕಡೆ ಹಾಸ್ಟೆಲ್‌ಗಳನ್ನು

ಕೊಡಬೇಕೆಂದು ಹೇಳಿದರು. ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಮಾಜಕಲ್ಯಾಣ ಇಲಾಖೆಯವರೂ ಕೂಡ ಈ ಹಾಸ್ಟಲುಗಳ ಸೌಕರ್ಯ ಕೊಡುವ ಜವಾಬ್ದಾರಿ ಅವರಿಗೆ ಸೇರಿರುವುದರಿಂದ, ಅವರು ಈಗಾಗಲೇ ಒಂದು ಸಬ್‌ಪ್ಲಾನ್ ಮಾಡಿ ಅದಕ್ಕೆ ೩೩-೩೫ ಕೋಟಿ ರೂಪಾಯಿಗಳನರೆಗೂ ಒಂದು ಯೋಜನೆಯನ್ನು ಹಾಕಿ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ಮತ್ತು ಇನ್ನೂ ಇತರ ಡಿಪಾರ್ಟ್‌ಮೆಂಟ್‌ಗಳಿಂದಲೂ ಕೂಡ ಹಣವನ್ನು ಹಿಂದುಳಿದ ವರ್ಗಗಳ ಅಭಿವೃದ್ಧಿಗೋಸ್ಕರವಾಗಿ ಖರ್ಚುಮಾಡಬೇಕೆಂದು ಕೇಂದ್ರಸರ್ಕಾರದ ಒಂದು ನಿರ್ದೇಶನಕ್ಕೆ ನಾವು ಒಪ್ಪಿಕೊಂಡು ಈಗಾಗಲೇ ಒಂದು ಸಬ್ ಪ್ಲಾನನ್ನು ಪ್ರಿಪೇರ್‌ಮಾಡಿದ್ದೇವೆ. ಬಹುಶ: ಎಲ್ಲಾ ಕಾಲೇಜುಗಳಲ್ಲಿಯೂ ಓದತಕ್ಕ ಹರಿಜನ ಗಿರಿಜನರಿಗೆ ಸ್ಕಾಲರ್‌ಶಿಪ್‌ಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಹಾಸ್ಟಲ್ ಸೌಕರ್ಯಗಳನ್ನು ಕೊಡುವುದಕ್ಕಾಗುವುದಿಲ್ಲ. ಕೊನೆಗೆ ಸೇಕಡ ೩೦ ಜನಗಳಿಗೆ ಕಡಿಮೆ ಇಲ್ಲದಂತೆ ಬಾಡಿಗೆ ತೆಗೆದುಕೊಂಡು ಮಾಡಿದರೆ ಆಗ ಸಮಾಜಕಲ್ಯಾಣ ಮತ್ತು ವಿದ್ಯಾಭ್ಯಾಸ ಇಲಾಖೆಯಿಂದ ಅದರ ಒಂದು ನೆರವಿನಿಂದ ರೆಂಟ್ ವಗೈರೆ ಕೊಡುವುದಕ್ಕೆ ಪರಿಶೀಲನೆಮಾಡಬೇಕು. ಆದ್ದರಿಂದ ಎಲ್ಲ ಕಡೆಗಳಲ್ಲಿಯೂ ಹಾಸ್ಟಲ್ ಸೌಕರ್ಯಗಳನ್ನು ಕೊಡುವುದಕ್ಕಾಗುವುದಿಲ್ಲ. ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಶಿಪ್‌ಗಳನ್ನು ಕಾಲೇಜಿನಲ್ಲಿ ಓದತಕ್ಕವರಿಗೆ ಕೊಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸೇಕಡ ೩೦ರಷ್ಟು ಜನರಿಗೆ ಆ ರೀತಿಯಾಗಿ ಕೊಡುತ್ತಿದ್ದೀರಿ. ಸೆಂಟ್ ಪರ್ಸೆಂಟ್ ಕೊಡುತ್ತಾ ಇಲ್ಲ. ಯಾವ ಸ್ಟೇಜಿನಲ್ಲಿ ಹರಿಜನ ಗಿರಿಜನ ವರ್ಗದವರು ಓದುತ್ತಿದ್ದಾರೋ ಅವರಿಗೆಲ್ಲರಿಗೂ ಒಂದನೇ ತರಗತಿಯಿಂದ ೧೦ನೇ ತರಗತಿಯವರಗೆ ಸ್ಕಾಲರ್‌ಶಿಪ್ ಕೊಡಬೇಕೆಂದು ಒಂದು ನಿಯಮವಿಲ್ಲವೇ?

ಶ್ರೀ ಮಲ್ಲಿಕಾರ್ಜುನಸ್ವಾಮಿ.—ಇದನ್ನು ಮಾಡುವುದಕ್ಕೆ ಅಷ್ಟು ಸುಲಭವಲ್ಲ. ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲ್‌ಗಳಲ್ಲಿ ಓದತಕ್ಕ ಮಕ್ಕಳಿಗೆ ಹಾಸ್ಟಲ್ ಸೌಕರ್ಯಗಳಿವೆ. ಅಂದ ಮೇಲೆ ಈ ಸೌಕರ್ಯವನ್ನು ಎಲ್ಲ ಮಕ್ಕಳಿಗೂ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ ಆ ರೀತಿಯಾಗಿ ಕೊಡುತ್ತಾ ಹೋದರೆ, ಬಡ್ಜೆಟ್ಟಿನಲ್ಲಿ ಎಜುಕೇಷನ್ ಡಿಮ್ಯಾಂಡಿನಲ್ಲಿ ಇದೊಂದು ಬಾಬಿಗೆ ಎಲ್ಲ ಹಣವನ್ನೂ ಕೊಡಬೇಕಾಗುತ್ತದೆ. ಅದೆಲ್ಲ ಹಣವನ್ನೂ ಇದಕ್ಕಾಗಿಯೇ ಖರ್ಚುಮಾಡಬೇಕಾಗುತ್ತದೆ. ಅದಕ್ಕೋಸ್ಕರವೇ ಈಗ ಸಬ್ ಪ್ಲಾನ್ ಮಾಡಿರುವುದು. ಅದರಲ್ಲಿ ಇದನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಇವತ್ತಿನದಿವಸ ಈ ಒಂದು ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಸನ್ಮಾನ್ಯ ಸದಸ್ಯರು ಬಹಳ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಅನೇಕ ಸೂಕ್ತವಾದ ಸಲಹೆಗಳನ್ನು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಕೊಟ್ಟಿದ್ದಾರೆ. ನಾವೂ ಸಹ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಹಾಗೂ ಇದನ್ನು ಒಳ್ಳೆಯ ರೀತಿಯಲ್ಲಿ ಮುಂದುವರಿಸುವುದಕ್ಕೆ ಮತ್ತು ಈ ದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಎಷ್ಟರಮಟ್ಟಿಗೆ ಸಾಧ್ಯವೆಂಬುದನ್ನು ಯೋಚಿಸಿ ಇದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ವಿದ್ಯಾಭ್ಯಾಸ ಕ್ರಮದಲ್ಲಿ ಅಭಿವೃದ್ಧಿ ಮಾಡಲು ಒಳ್ಳೆಯ ಏರ್ಪಾಟುಮಾಡಬೇಕಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಬೆಂಗಳೂರು ನಗರದಲ್ಲಿ ಎಲ್ಲಾ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಹರಿಜನ ಮತ್ತು ಗಿರಿಜನ ಮಕ್ಕಳಿಂದ ಕಂಪಲ್ಸರಿಯಾಗಿ ಫೀ ವಸೂಲುಮಾಡುತ್ತಿದ್ದಾರೆ. ರಾಜ್ಯಾಂಗದಲ್ಲಿ ಅವರಿಗೆ ಫ್ರೀಯಾಗಿ ವಿದ್ಯಾಭ್ಯಾಸ ಕೊಡಬೇಕೆಂದಿರುವಾಗ, ನಮ್ಮ ಸರ್ಕಾರ ಅವರೆಲ್ಲರಿಗೂ ವಿದ್ಯಾರ್ಥಿವೇತನ ಕೊಡುವುದಿಲ್ಲ, ಅದರಿಂದ ಅವನಿಗೆ ಫೀಸ್ ಕೊಡುವುದಕ್ಕಾಗುವುದಿಲ್ಲ. ಹೀಗಿರುವಾಗ ಅವರಿಗೆ ಕಾಲೇಜಿನಲ್ಲಿ ಸರ್ಕಾರ ಕೊಡತಕ್ಕ ಕನ್‌ಸೆಷನ್‌ಗಳೇನು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಮಾನ್ಯ ಸದಸ್ಯರು ಪ್ರಶ್ನೆಹಾಕಿ ಅವರೇ ಉತ್ತರ ಹೇಳಿದ್ದಾರೆ. ಈಗಾಗಲೇ ಗ್ರ್ಯಾಂಟ್ ಇನ್‌ಏಡ್ ಆಕ್ಟ್ ಪ್ರಕಾರ ಅವರಿಗೆ ಅನುದಾನ ಕೊಟ್ಟರೆ ಅವರು ಪುನಃ ಕಂಪಲ್ಸರಿಯಾಗಿ ಫೀ ಕೊಡಬೇಕಾಗಿಲ್ಲ ಎಂಬುದನ್ನು ರೂಲ್ಸ್‌ನ್ನು ಇನ್ನೂ ಸ್ಪಷ್ಟವಾಗಿ ಅಳವಡಿಸಬೇಕಾಗಿದೆ. ನಾನು ಅವರಿಗೆ ಆ ರೀತಿ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ ಮಾನ್ಯ ಸದಸ್ಯರು ಎಜುಕೇಷನ ಡಿಮ್ಯಾಂಡಿಗೆ ಸಂಬಂಧಪಟ್ಟಹಾಗೆ ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಇಲಾಖೆಗೆ ಸಂಬಂಧಪಟ್ಟ ಎರಡು ಬೇಡಿಕೆಗಳಿಗೂ ಈ ಸಭೆ ಅಂಗೀಕಾರ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಮಾನ್ಯ ಮಂತ್ರಿಗಳು ಗ್ರಂಥಾಲಯಗಳ ಬಗ್ಗೆ ನನಗೆ ಹೇಳಬೇಕು. ಕೇವಲ ಪಟ್ಟಣಗಳಲ್ಲಿ ಮತ್ತು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿರತಕ್ಕ ಗ್ರಂಥಾಲಯ ಗಳ ವಿಷಯವಾಗಿ ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಸ್ಕೀಮನ್ನೇನಾದರೂ ಮಾಡಿದ್ದಿರಾ? ಅದಕ್ಕೆ ಎಷ್ಟು ಹಣವನ್ನು ಖರ್ಚುಮಾಡಬೇಕೆಂದಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಪಬ್ಲಿಕ್ ಲೈಬ್ರರಿ ಆಕ್ಟ್ ಓದಿದರೆ ಅಲ್ಲಿ ಅವೆಲ್ಲಕ್ಕೂ ಅವಕಾಶ ಮಾಡಿದೆ.

ಶ್ರೀ ಎಸ್. ಹಮೀದ್‌ಷಾ.—ಮುಸ್ಲಿಂ ಸ್ಕಾಲರ್‌ಷಿಪ್ಸ್ ಬಗ್ಗೆ ಸೆಕ್ಯುಲರಾಗಿ ಇರಬೇಕೆಂದು ಹೇಳಿದಿರಿ. ಕುರಾನ್‌ನಲ್ಲಿ ಮುಸ್ಲಿಂ ಶಬ್ದ ಬರೆದಿದ್ದಾರೆ. ಕುರಾನ್ ಉರ್ದುವಿನಲ್ಲಿ ಇದೆಯೆಂದು ಹೇಳಿದೆ. ಇನ್ನು ಯಾವ್ಯಾವ ಭಾಷೆಯಲ್ಲಿ ಇದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾನು ಉರ್ದು ಓದಿದ್ದೇನೆ. ಉರ್ದು ಕಲಿತಿದ್ದೇನೆ. ಅದು ಈಗ ಯಾವ ಭಾಷೆಯಲ್ಲಿದೆಯೆಂದಲ್ಲ. ನಾವು ಸೆಕ್ಯುಲರ್ ಸ್ಟೇಟ್‌ನಲ್ಲಿರುವಾಗ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ಹೇಳಿದ್ದೇನೆ.

ಶ್ರೀ ಬಿ. ಜಿ. ಸನ್ನದಿ.—ಸರ್ಕಾರ ಕೊಡತಕ್ಕ ಎರಡೂವರೆ ಸಾವಿರ ರೂಪಾಯಿಗಳಲ್ಲಿ ಶಾಲಾ ಕಟ್ಟಡ ಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಆಗಲೀ, ಅಥವಾ ಕಾರ್ಪೊರೇಷನ್ ಆಗಲೀ, ಅಥವಾ ಮುನಿಸಿಪಾಲಿಟಿಗಳಾಗಲೀ ದಿನೇದಿನೇ ಬೆಳೆಯತಕ್ಕ ಜನ ಸಂಖ್ಯೆಗೆ ಅನುಗುಣವಾಗಿ ವಸತಿ ಸೌಕರ್ಯಗಳನ್ನು ಇಂಪ್ರೂವ್ ಮಾಡಲು ಈಗ ಹೊರಟಿರುವಾಗ ಮತ್ತು ಕೆಲವಾರು ಬಡಾವಣೆಗಳಲ್ಲಿ ಶಾಲಾ ಕಟ್ಟಡಗಳ ಸಲುವಾಗಿ ಒಂದು ಜಾಗವನ್ನು ನಿಗದಿ ಮಾಡಿದ ಮೇಲೆ ಅದಕ್ಕೆ ಬೇಕಾದಂಥ ಅಂಡರ್‌ಗ್ರೌಂಡ್ ಡ್ರೈನೇಜ್ ಮತ್ತು ಲೇಔಟ್ ಚಾರ್ಜಸ್ ಅವರೆ ಕೊಡುತ್ತಿ ರುವಾಗ ಅದೆ, ರೀತಿಯಲ್ಲಿ ಇಲ್ಲಿಯೂ ಮಕ್ಕಳಿಗೆ ಬೇಕಾದಂಥ ಶಾಲಾಕಟ್ಟಡಗಳನ್ನು ಕಟ್ಟುವುದಕ್ಕೆ ಅವರ ಕಡೆಯಿಂದಲೂ ಫೀಸ್ ವಸೂಲುಮಾಡುವುದಕ್ಕೆ ಸರ್ಕಾರದವರು ಯೋಚನೆಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ನಮ್ಮ ಆಬ್ಲಿಗೇಟರಿ ಡ್ಯೂಟಿಯಲ್ಲ ಎಂದು ಪೌರಸಭೆ ಯವರು ಹೇಳುತ್ತಿದ್ದಾರೆ. ಹೀಗಿರುವಾಗ ಅಲ್ಲಿ ಈ ಕಾರ್ಯ ನಡೆಯಬೇಕಾಗಿದ್ದರೆ ನಾವು ಆ ಮುನಿಸಿಪಲ್ ಆಕ್ಟಿಗೆ ತಿದ್ದುಪಡಿಯನ್ನು ತರಬೇಕು ಎಂದು ಹೇಳುತ್ತಾರೆ.

MADAM SPEAKER.—I will now pot the motion to the vote of the House. The question is :

"That the respects or sums not exceeding the amount mentioned in the list of demands be grantes to Government to defray the charges which will come in course of Payment during the financial year ending 31st of day of March 1976 in respect of Demand Nos. 17 and 23"

The motion was adopt ed and the Demands Voted. As directed by the chair. the motion for, Demands for Grunts, adopeted by the House are reproduced below.

DEMAND No. 17 :— (Stationery and Printing)

"That a sum not exceeding Rs. 2,06,90,000 be granted to Government to defray the charges which will come in course of payment during the financial year ending 31st day of March 1976 in respect of Demand No. 17, 'Stationery and printing'. "

DEMAND No. 23 :—

"Education (excluding Youth Service) Scientific Research and Art Culture"

That a sum not exceeding Rs. 91,23,92,000 be granted to the Government to defray the charges which will come in course of payment duriug the financial year ending 31st day of March 1976 in respect of "Education (excluding Youth Services) Scientific Research and Art and Culture". "

MADAM SPEAKER.—

The House now stands adjourned to meet again on Thursday, at 1-00 P.M.

The House adjourned at Fifty Two Minutes past One of the Clock to meet again at One of the Clock, on Thursday, the 13th March 1975.